بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّي عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 03

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 46

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

17 ನವೆಂಬರ್ 2022, 17 ನಬುವ್ವತ್ 1401 ಹಿಜರಿ ಶಮ್‌ಸಿ,
21 ರಬೀ ಉಸ್ಸಾನಿ 1444 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

رَبَّنَا لَا تُزِغْ قُلُوْبَنَا
بَعْدَ اِذْ هَدَيْتَنَا
وَهَبْ لَنَا مِنْ لَّدُنْكَ رَحْمَةً
اِنَّكَ اَنْتَ الْوَهَّابُ (آل عمران:9)

(ಆಲಿ ಇಮ್ರಾನ್ : 09)

ಅಂದರೆ: ನಮ್ಮ ಪ್ರಭೂ, ನೀನು ನಮಗೆ ಮಾರ್ಗದರ್ಶನವನ್ನು ಮಾಡಿದ ಬಳಿಕ ನಮ್ಮ ಹೃದಯಗಳಲ್ಲಿ ವಕ್ರಬುದ್ಧಿಯುಂಟಾಗುವಂತೆ ಮಾಡದಿರು. ನೀನು ನಮಗೆ ನಿನ್ನಿಂದ ಕರುಣೆಯನ್ನು ದಯಪಾಲಿಸು. ನಿಸ್ಸಂದೇಹವಾಗಿಯೂ ನೀನೇ ಅತಿದೊಡ್ಡ (ಅನುಗ್ರಹ)ದಾತ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಯಾರಾದರು ಒಬ್ಬರ ಬೆರಳನ್ನು ಹಲ್ಲಿನಿಂದ ಕಚ್ಚಿದರೆ, ಕಚ್ಚುವವನ ಹಲ್ಲು ಕೈ ಎಳೆದಾಗ ಮುರಿದುಹೋದರೆ ಹಲ್ಲಿಗೆ ಪ್ರತಿಫಲವಾಗಿ ಏನನ್ನು ನೀಡಲಾಗುವುದಿಲ್ಲ

**(2265)** ಹಝ್‌ರತ್ ಯಾಲಾ ಬಿನ್ ಉಮಯ್ಯ(ರ) ಅವರು ವರದಿ ಮಾಡುತ್ತಾರೆ: ಅವರು ಹೇಳಿದರು, ನಾನು ಪ್ರವಾದಿ (ಸಲ್ಲಲ್ಲಾಹು ಅಲೈಹಿವ ಸಲ್ಲಮ್) ಅವರೊಂದಿಗೆ ಜೈಶ್ ಅಲ್-ಉಸ್ರಾದಲ್ಲಿ (ಅಂದರೆ ತಬೂಕ್ ಕದನ) ಯುದ್ಧಕ್ಕೆ ಸೇರಿಕೊಂಡೆ. ನನ್ನ ಪ್ರಕಾರ ಈ ಕೆಲಸವು (ಪ್ರತಿಫಲದ ವಿಷಯದಲ್ಲಿ) ಎಲ್ಲಾರಿಂದಲೂ ಹೆಚ್ಚಾಗಿ ನಂಬಲಾರ್ಹ ಕಾರ್ಯಗಳಲ್ಲಿ ಒಂದಾಗಿತ್ತು. (ನನ್ನ ಜೊತೆಯಲ್ಲಿದ್ದ) ನನ್ನ ಓರ್ವ ಕಾರ್ಮಿಕನು ಒಬ್ಬ ವ್ಯಕ್ತಿಯೊಂದಿಗೆ ಜಗಳವಾಡಿದನು. ಜಗಳದ ಸಮಯದಲ್ಲಿ, ಅವರಲ್ಲಿ ಒಬ್ಬನು ಇನ್ನೊಬ್ಬನ ಬೆರಳನ್ನು ಕಚ್ಚಿದನು. ಆ ಸಮಯದಲ್ಲಿ ಕಚ್ಚಿಸಿಕೊಂಡವನು ತನ್ನ ಬೆರಳನ್ನು ಬಲವಂತವಾಗಿ ಎಳೆದಾಗ, ಇನ್ನೊಬ್ಬನ ಹಲ್ಲು ಬಿದ್ದುಹೋಯಿತು. ಆಗ ಅವನು ಈ ದೂರಿನೊಂದಿಗೆ ಪ್ರವಾದಿ(ಸ) ರ ಬಳಿಗೆ ಹೋದನು. ರಸೂಲುಲ್ಲಾಹ್(ಸ) ರವರು ಅವನ ಹಲ್ಲಿಗೆ ಯಾವುದೇ ಪರಿಹಾರವನ್ನು ಕೊಡಿಸಲಿಲ್ಲ ಮತ್ತು ಪ್ರವಾದಿ(ಸ) ಅವರು ಹೇಳಿದರು: ಅವನು ತನ್ನ ಬೆರಳನ್ನು ನಿನ್ನ ಬಾಯಿಯಲ್ಲಿ ಅಗಿಯಲು ಬಿಡಬೇಕಾಗಿತ್ತೇ? (ಇಬ್ನ್ ಜರಿಜ್) ಹೇಳುತ್ತಿದ್ದರು: ನನ್ನ ಯೋಚನೆಯ ಪ್ರಕಾರ ರಸೂಲುಲ್ಲಾಹ್(ಸ)ರವರು ಒಂದು ಗೂಳಿ ಅಗಿಯುವಂತೆ ಎಂದು ಹೇಳಿದರು.

**(ಬುಖಾರಿ, ಸಂಪುಟ-4, ಕಿತಾಬ್ ಅಲ್-ಅಜಾರ, 2008 ಖಾದಿಯಾನ್‌ನಲ್ಲಿ ಪ್ರಕಟವಾಗಿದೆ)**

## ನಾವು ಬಯಸುವ ಮತ್ತು ಸರ್ವಶಕ್ತ ದೇವರು ನಮ್ಮನ್ನು ಕಳುಹಿಸಿರುವ ಉದ್ದೇಶ ಮತ್ತೆ ಮತ್ತೆ ಇಲ್ಲಿಗೆ ಬಂದು ಜನ ಬರದಂತೆ ತಡೆಯದ ಹೊರತು ಅದು ಈಡೇರುವುದಿಲ್ಲ

**ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ಖಾದಿಯಾನಿಗೆ ಸಾಧ್ಯವಾದಷ್ಟು ಹೆಚ್ಚು ಬಾರಿ ಭೇಟಿ ನೀಡಲು ಒತ್ತು

ಡಿಸೆಂಬರ್ 1899 ರಲ್ಲಿ ನಡೆದ ಜಲ್ಸ ಸಾಲಾನಕ್ಕೆ (ವಾರ್ಷಿಕ ಸಮ್ಮೇಳನಕ್ಕೆ) ಕೆಲವೇ ಜನರು ಬಂದಿದ್ದರು. ಅದಕ್ಕೆ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ವಿಷಾದವನ್ನು ವ್ಯಕ್ತಪಡಿಸುತ್ತಾ ಹೇಳಿದರು: "ಜನರಿಗೆ ನಮ್ಮ ಉದ್ದೇಶಗಳು ಹಾಗೂ ನಾವು ಏನು ಬಯಸುತ್ತೇವೆ ಎಂಬುದರ ಬಗ್ಗೆ ಇನ್ನೂ ತಿಳಿದಿಲ್ಲ. ನಾವು ಬಯಸುವ ಉದ್ದೇಶಗಳು ಮತ್ತು ಯಾವ ಉದ್ದೇಶಕ್ಕಾಗಿ ಸರ್ವಶಕ್ತನಾದ ಅಲ್ಲಾಹನು ನನ್ನನ್ನು ಕಳುಹಿಸಿದ್ದಾನೋ ಆ ಉದ್ದೇಶವು ಜನರು ಮತ್ತೆ ಮತ್ತೆ ಇಲ್ಲಿಗೆ ಬರದ ಹೊರತು ಮತ್ತು ಇಲ್ಲಿಗೆ ಬರುವುದಕ್ಕೆ ನಿರುತ್ಸಾಹಗೊಳ್ಳದ ಹೊರತು ಅದು ಈಡೇರುವುದಿಲ್ಲ."

ಮತ್ತು ಅವರು ಮುಂದುವರೆದು ಹೇಳಿದರು: "ಯಾರು ಖಾದಿಯಾನಿಗೆ ಬರುವುದು ತಮಗೆ ಹೊರೆ ಎಂದೋ ಅಥವಾ ನಾವು ಇಲ್ಲಿ ಉಳಿಯುವುದು ನಮ್ಮ ಮೇಲೆ ಹೊರೆ ಎಂದು ಭಾವಿಸುತ್ತಾರೋ, ಅವರು ಶಿರ್ಕ್‌ನಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಭಯಪಡಬೇಕು, ಇಡೀ ಜಗತ್ತೇ ನಮ್ಮ ಕುಟುಂಬಸ್ತರಾದರೆ ಸರ್ವಶಕ್ತನಾದ ಅಲ್ಲಾಹನು ಸ್ವತಃ ನಮ್ಮ ಎಲ್ಲಾ ಅಭಿಯಾನಗಳ ಬೆಂಬಲಿಗನಾಗುವನು ಎಂದು ನಾವು ನಂಬುತ್ತೇವೆ. ನಮ್ಮ ಮೇಲೆ ಒಂದು ಹೊರೆಯೂ ಇಲ್ಲ. ಸ್ನೇಹಿತರ ಅಸ್ತಿತ್ವದಿಂದ ನಮಗೆ ದೊಡ್ಡ ನೆಮ್ಮದಿ ದೊರಕುತ್ತದೆ. ಇದಿ ಪಿಸಿಮಾತಾಗಿದೆ ಇದನ್ನು ನಮ್ಮ ಮನಸ್ಸುಗಳಿಂದ ದೂರ ಸರಿಸಬೇಕಾಗಿದೆ. ನಾವೇಕೆ ಇಲ್ಲಿ ಕುಳಿತು ಹಝ್‌ರತ್ ಸಾಹೇಬರಿಗೆ ತೊಂದರೆ ನೀಡಬೇಕು ಎಂದು ಕೆಲವರು ಹೇಳುವುದನ್ನು ನಾನು ಕೇಳಿದ್ದೇನೆ. ನಾವಂತು ನಿರುಪಯೋಗರಾಗಿದ್ದೇವೆ ನಾವೇಕೆ ಇಲ್ಲಿ ಕುಳಿತು ರೊಟ್ಟಿ ತಿನ್ನಬೇಕು? ಅವರು ಇದನ್ನು ನೆನಪಿನಲ್ಲಿಟ್ಟಕೊಳ್ಳಬೇಕು, ಅವರ ಪಾದಗಳು ಇಲ್ಲಿ ಹೆಪ್ಪುಗಟ್ಟದಂತೆ ಸೈತಾನನು ಅವರ ಮನಸ್ಸಿನಲ್ಲಿ ಹಾಕಿರುವ ಪೈಶಾಚಿಕ ಪಿಸುಮಾತುಳಾಗಿವೆ.

ಒಂದು ದಿನ ಹಕೀಂ ಫಜಲ್ ದೀನ್ ಸಾಹೇಬರು ಹೇಳಿದರು: "ಹುಝೂರ್ ನಾನೇನು ಇಲ್ಲಿ ನಿರುಪಯೋಗನಾಗಿ ಹರಟೆ ಹೊಡೆಯುತ್ತಾ ಏಕೆ ಕುಳಿತಿದ್ದೇನೆ? ಅಪ್ಪಣೆ ಇದ್ದರೆ ನಾನು ಭೈರಾಗೆ ಹೋಗುತ್ತೇನೆ. ನಾನು ಅಲ್ಲಿ ಪವಿತ್ರ ಖುರ್‌ಆನ್ ಅನ್ನು ಕಲಿಸುತ್ತೇನೆ. ಇಲ್ಲಿ ನಾನು ಹುಝೂರ್ ಅಲೈಹಿಸ್ಸಲಾಮ್ ಅವರಿಗೆ ಯಾವುದೇ ಪ್ರಯೋಜನಕ್ಕೆ ಬರುತ್ತಿಲ್ಲವಲ್ಲ ಎಂದು ನಾಚಿಕೆಯಾಗುತ್ತಿದೆ. ಬಹುಶಃ ಸುಮ್ಮನೆ ಕುಳಿತುಕೊಳ್ಳುವುದರಿಂದ ಯಾವುದೇ ಪಾಪವಾಗಬಾರದು." ಅದಕ್ಕೆ ಅವರು ಹೇಳಿದರು: "ನೀವು ಇಲ್ಲಿ ಕುಳಿತಿರುವುದೇ ಒಂದು ಜಿಹಾದ್ ಆಗಿದೆ ಮತ್ತು ಈ ನಿರುಪಯೋಗತನದಲ್ಲೆ ಬಹಳ ಉಪಯೋಗವಿದೆ."

ಹೀಗೆ, ಅವರು ಬಹಳ ನೋವಿನ ಮತ್ತು ವಿಷಾದದ ಮಾತುಗಳಲ್ಲಿ ಬರದವರ ಬಗ್ಗೆ ಹೇಳಿದರು: "ಈ ಮನ್ನಿಸುವವರು ಯಾರಾಗಿದ್ದಾರೆ ಎಂದರೆ ಪವಿತ್ರ ಪ್ರವಾದಿ(ಸ) ಅವರ ಬಳಿ ಬಂದು **ಇನ್ನ ಬುಯೂತನಾ ಔರತುನ್** ಎಂದು ಹೇಳಿದಾಗ ಸರ್ವಶಕ್ತನಾದ ಅಲ್ಲಾಹನು ಅವರ ಈ ಮಾತನ್ನು **ಇಂಯ್ಯುರೀದೂನ ಇಲ್ಲ ಫಿರಾರ್** (ಅಲ್‌ಅಹ್‌ಝಾಬ್: 14) ಎಂದು ರದ್ದುಗೊಳಿಸಿದನು. ಅವರು ಹೇಳಿದರು: "ನಮ್ಮ ಸ್ನೇಹಿತರಿಗೆ ಆಯುಷ್ಯ ಬಹಳ ದೀರ್ಘವಾಗಿದೆ ಎಂದು ಯಾರು ಹೇಳಿರುವುದು. ಮರಣಕ್ಕೆ ಯಾವ ಸಮಯವೂ ಇಲ್ಲ ಅದು ಯಾವಾಗ ತಲೆಯ ಮೇಲೆ ಬರುವುದು ಎಂಬ ಅರಿವಿರುವುದಿಲ್ಲ. ಹಾಗಾಗಿ ಇರುವ ಸಮಯವನ್ನು ಸದುಪಯೋಗಪಡಿಸಿಕೊಳ್ಳುವುದು ಸೂಕ್ತ." ಅವರು ಹೇಳಿದರು: "ಈ ದಿನಗಳು ಮತ್ತೆ ಕಂಡುಬರುವುದಿಲ್ಲ ಮತ್ತು ಈ ಕಥೆಗಳು ಉಳಿದಿರುತ್ತವೆ."

**(ಮಲ್‌ಫೂಝಾತ್, ಸಂಪುಟ-1, ಪುಟ-410, ಮುದ್ರಿತ ಖಾದಿಯನ್ 2018)**

### *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.** **(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرٌّ مَا فِی الْعَالَمِ ✿ شَرُّ السُّمُوْمِ عَدَاوَۃُ الصُّلَحَاءِ

**ಮುಹಿಯುದ್ದೀನ್‌ನ ಈ ಇಲ್‌ಹಾಮ್ "ಇನ್ನ ಶಅ್‌ನಿಯಕ ಹುವಲ್ ಅಬ್ತರ್" ಅವನ ಮೇಲೆಯೇ ನಿಜವಾಯಿತು. ಈ ಇಲ್‌ಹಮ್‌ನ ನಂತರ ಮುಹಿಯುದ್ದೀನ್ ಅವರ ಮನೆಯಲ್ಲಿ ಒಬ್ಬ ಹುಡುಗ ಜನಿಸಿದ್ದಾನೆ ಅವನು ಇನ್ನೂ ಜೀವಂತವಾಗಿದ್ದಾನೆ ನಾನು ಅವರ ಪತ್ನಿಗೆ 100 ರೂಪಾಯಿ ನಗದು ನೀಡುತ್ತೇನೆ ಎಂದು ವಾಗ್ದಾನ ಮಾಡುತ್ತೇನೆ**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ಈ ವೈಭವಯುತ ಬಹುಮಾನದ ಪಂಥಾಹ್ವಾನವನ್ನು ನಾವು ಅವರ ಗ್ರಂಥವಾದ "ಹಖೀಖತುಲ್ ವಹೀ" ರೂಹಾನಿ ಖಝಾಈನ್ ಸಂಪುಟ–22 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ತಮ್ಮ ಗ್ರಂಥ "ಹಖೀಖತುಲ್ ವಹೀ" ಪುಟ 160ರಲ್ಲಿ ಒಂದು ಕುರುಹನ್ನು ವಿವರಿಸಿದ್ದಾರೆ, ಅದು ಅಬ್ದುರ್ರಹ್ಮಾನ್ ಮುಹಿಯುದ್ದೀನ್ ಲಖೋಖೆಯವರಿಗೆ ಸಂಬಂಧಿಸಿದೆ. "ಲಖೋಖೆ" ಪಂಜಾಬ್ ಪ್ರಾಂತ್ಯದ ಫಿರೋಜ್‌ಪುರ ಜಿಲ್ಲೆಯ ಒಂದು ಹಳ್ಳಿಯಾಗಿದ್ದು, ಅಲ್ಲಿ ಈ ವ್ಯಕ್ತಿ ವಾಸಿಸುತ್ತಿದ್ದರು. ದೇಶ ವಿಭಜನೆಯ ನಂತರ ಈ ಕುಟುಂಬ ಪಾಕಿಸ್ತಾನಕ್ಕೆ ತೆರಳಿತು. ಅವರ ತಂದೆಯ ಹೆಸರು ಹಫೀಜ್ ಮುಹಮ್ಮದ್ ಮತ್ತು ಅಜ್ಜನ ಹೆಸರು ಹಫೀಜ್ ಬಾರಾಕುಲ್ಲಾ ಎಂದಾಗಿತ್ತು. ಈ ಕುಟುಂಬವು ತನ್ನ ಪ್ರದೇಶದ ಸುಶಿಕ್ಷಿತ ಮತ್ತು ಪ್ರಸಿದ್ಧ ಕುಟುಂಬವಾಗಿತ್ತು. ಅಬ್ದುರ್ರಹಮಾನ್ ಮುಹಿಯುದ್ದೀನ್ ಲಖೋಖೆಯವರು ಬರೆದ ಪತ್ರವನ್ನು ನಾವು ಕೆಳಗೆ ಪ್ರಸ್ತುತಪಡಿಸುತ್ತೇವೆ, ಅದರಲ್ಲಿ ಅವರ ಒಂದು ಇಲ್‌ಹಾಮ್‌ನ ಆಧಾರದ ಮೇಲೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ಫಿರ್‌ಔನ್ ಎಂದು ಕರೆದರು, (ನೌಝುಬಿಲ್ಲಾಹಿ ಮಿನ್ ಝಾಲಿಕ್) ಹಾಜಿ ಅಲ್–ಹರಮೈನ್, ಮೌಲಾನಾ ಹಕೀಮ್ ನೂರುದ್ದೀನ್ ಸಾಹಿಬ್ ಖಲೀಫತುಲ್ ಮಸೀಹ್ ಅಲ್–ಅವಾಲ್(ರ) ಅವರನ್ನು ಹಾಮಾನ್ ಎಂದು ಕರೆದನು (ನೌಝುಬಿಲ್ಲಾಹಿ ಮಿನ್ ಝಾಲಿಕ್) ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಹೇಳುತ್ತಾರೆ:

"ಈಗ ನನ್ನ ಕೈಯಲ್ಲಿ ಮೌಲ್ವಿ ಅಬ್ದುಲ್ ರಹಮಾನ್ ಮುಹಿಯುದ್ದೀನ್ ಲಖೋಖೆವಾಲೆಯವರು ಬರೆದಿರುವ ಪತ್ರವಿದೆ. ಅದನ್ನು ನಮ್ಮ ಓರ್ವ ಸ್ನೇಹಿತ ಫಾಝಿಲ್ ಜಲೀಲ್ ಮುಖಾಂತರ ಮೌಲವಿ ಹಕೀಮ್ ನೂರ್‌ಉದ್ದೀನ್ ಸಾಹಿಬ್ ಅವರು ನನಗೆ ನೀಡಿದರು. ಮತ್ತು ಅದನ್ನು ನಾನು ಸರ್ವಶಕ್ತನಾದ ಅಲ್ಲಾಹನ ಒಂದು ವೈಭವಯುತ ಸಂಕೇತವೆಂದು ಅರ್ಥಮಾಡಿಕೊಂಡಿದ್ದೇನೆ, ಆದ್ದರಿಂದ ನಾನು ಕೆಳಗೆ ಉಲ್ಲೇಖಿಸಿರುವ ಮೌಲ್ವಿ ಸಾಹಿಬ್ ಅವರ ಸಹಿ ಇರುವ ಮೂಲ ಪತ್ರದ ಪ್ರತಿಯನ್ನು ಬರೆಯುತ್ತಿದ್ದೇನೆ ಮತ್ತು ನಂತರ ಅದು ನನಗೆ ಹೇಗೆ ಸಂಕೇತವಾಗಿದೆ ಎಂಬುದನ್ನು ತೋರಿಸುತ್ತೇನೆ ಮತ್ತು ಆ ಪತ್ರವು ಹೀಗಿದೆ:

**ಬಿಸ್ಮಿಲ್ಲಾಹಿರ್ರಹ್ಮಾನ್ ನಿರ್ರಹೀಮ್– ಹಾಮಿದನ್ ವ ಮುಸಲ್ಲಿಯನ್**

ತದನಂತರ ಅಬ್ದುರ್ರಹ್ಮಾನ್ ಮುಹಿಯುದ್ದೀನ್ ಇಸ್ಲಾಂ ಧರ್ಮಕ್ಕೆ ಸೇರಿರುವಂತಃ ಎಲ್ಲಾ ಜನರಿಗೆ ಉದ್ದೇಶಿಸಿ ಹೇಳುವುದೇನೆಂದರೆ ಈ ವಿನಮ್ರ ವ್ಯಕ್ತಿಯು **ಯಾ ಖಬೀರು ಅಖ್ಬಿರನೀ (ಎಲೈ ವಾರ್ತೆ ನಿಡುವವನೆ ನನಗೆ ತಿಳಿಸು)** ಮಿರ್ಝಾನ ಸ್ಥಿತಿ ಏನಾಗಿದೆ?" ಎಂದು ಅಲ್ಲಾಹನಲ್ಲಿ ಪ್ರಾರ್ಥಿಸಿದೆ. ಆಗ ಕನಸಿನಲ್ಲಿ, ಈ ಇಲ್‌ಹಾಮ್ ಅವತರಿಸಿತು:

**ಇನ್ನ ಫಿರ್‌ಔನ ವ ಹಾಮಾನ ವ ಜುನೂದಹುಮಾ ಕಾನೂ ಖಾತಿಈನ– ವಇನ್ನ ಶಅ್‌ನಿಅಕ ಹುವಲ್ ಅಬ್ತರ್–**

ಮಿರ್ಝಾ ಸಾಹೇಬ್ ಅವರಿಂದ ಉತ್ತರ ಲಭಿಸಿತು ಅವರು ಹೇಳುತ್ತಾರೆ ಈ ಇಲ್‌ಹಾಮ್‌ನಲ್ಲಿ ಸಂಭಾವ್ಯ ಅರ್ಥವಿದೆ, ಇದರಲ್ಲಿ ನನ್ನ ಹೆಸರಿಲ್ಲ ಮತ್ತು ನನ್ನ ಹೆಸರಿನಲ್ಲಿ ಇಲ್‌ಹಾಮ್ ನೀಡಲಾಗಿಲ್ಲ ಎಂದು ಅವರು ದೃಢವಾಗಿ ಹೇಳಿಕೊಂಡರು. ಸಫರ್ ತಿಂಗಳಿನಲ್ಲಿ ಈ ಎರಡೂ ಇಲ್‌ಹಾಮ್‌ಗಳು ನಡೆದವು. ಮಿರ್ಝಾ ಸಾಹಿಬ್ ಅವರ ಉತ್ತರ ಲಭಿಸಿದಾಗ, ನಂತರ ಸಫರ್ ತಿಂಗಳಿನಲ್ಲಿ, ಈ ಇಲ್‌ಹಾಮ್ ಕನಸಿನಲ್ಲಿ ಸಂಭವಿಸಿತು, ಅಂದರೆ ಫಿರ್‌ಔನ್ ಅಲ್‌ಹಮ್ದುಲಿಲ್ಲಾಹಿ ಅಲಾಝಾಲಿಕ್ ಈಗ ಮಿರ್ಝಾ ಸಾಹಿಬ್ ಅವರ ದಾವೆಯೂ ಸಹ ತಪ್ಪಾಯಿತು ಮತ್ತು ಮಿರ್ಝಾ ಸಾಹಿಬ್ ತಮ್ಮ ಉದ್ದೇಶವನ್ನು ತಲುಪಿದರು ಮತ್ತು ಮೊದಲ ಬಾರಿಗೆ ನನಗೆ ಇಲ್‌ಹಾಮ್(ದೈವವಾಣಿ) ಆದಾಗ ನಿದ್ದೆಯಿಂದ ಜಾಗೃತಗೊಂಡಾಗ ಅದರ ಈ ಅರ್ಥವನ್ನು ಮನಸ್ಸಿನಲ್ಲಿ ಫಿರ್‌ಔನ್ ಮಿರ್ಝಾ ಸಾಹಿಬ್ ಆಗಿದ್ದಾರೆ ಮತ್ತು ಹಾಮಾನ್ ನೂರುದ್ದೀನ್ ಎಂದು ಸಂಭವಿಸಿತು, ನಾನು ಇಸ್ಲಾಂ ಧರ್ಮದ ಜನರ ಒಳಿತಿಗಾಗಿ ಇದನ್ನು ತಿಳಿಸುವುದು ಅತ್ಯವಶ್ಯಕ ಎಂದು ತಿಳಿಸುತ್ತಿದ್ದೇನೆ.

**ಹುನ್ ತೂಂ ಭೀ ಹಖ್ ಕಹನ್ ದೇ ಉತ್ತೇ ಲಕ್ ಬನ್ಹೇಂ ಭರಾವಾ ಎಹ್ಲೆ ನಿಫಾಖ್ ಬುಲಾಏಂ ಬುರ್‌ಯಾಂ ಲೊಕಾಂ ದೀನ್ ಭುಲಾವ ಅಲ್–ಅಬ್ದ್**

21 ರಬಿ–ಉಲ್–ಅವ್ವಲ್ 1312 ಹಿಜರಿ ದಿನಾಂಕದ ಅಬ್ದುಲ್ ರಹಮಾನ್ ಮುಹಿಯುದ್ದೀನ್ ಲಖೋಕೆ

ಇದು ಮೌಲ್ವಿ ಅಬ್ದುಲ್ ರಹಮಾನ್ ಮುಹಿಯುದ್ದೀನ್ ಅವರ ಪತ್ರವಾಗಿದ್ದು ಅದನ್ನು ನಕಲು ಮಾಡಿದ ನಂತರ ಅದನ್ನು ಮಾನ್ಯ ಮೌಲ್ವಿ ಹಕೀಮ್ ನೂರ್‌ಉದ್ದೀನ್ ಸಾಹಿಬ್ ಅವರಿಗೆ ಹಿಂತಿರುಗಿಸಲಾಗಿದೆ. ಅದನ್ನು ನೋಡಲು ಬಯಸುವವರಿಗೆ ಮೌಲ್ವಿ ಸಾಹಿಬ್ ಅದನ್ನು ಸುರಕ್ಷಿತವಾಗಿರಿಸುತ್ತಾರೆ." (ರೂಹಾನಿ ಖಝಾಈನ್, ಸಂಪುಟ–22, ಪುಟ–367)

ಮೌಲ್ವಿ ಅಬ್ದುಲ್ ರಹಮಾನ್ ಮುಹಿಯುದ್ದೀನ್ ಲಖೋಖೆವಾಲೆಯವರ ಕನಸು ಮತ್ತು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರು ನೀಡಿದ ಕನಸಿನಲ್ಲಿರುವ ಇಲ್‌ಹಾಮ್‌ನ ವ್ಯಾಖ್ಯಾನವನ್ನು ಕೆಳಕಂಡಂತೆ ವಿವರಿಸಲಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಅನೇಕ ಜನರು ತಮ್ಮ ಕನಸುಗಳನ್ನು ಅರ್ಥಮಾಡಿಕೊಳ್ಳದ ಕಾರಣ ನಾಶವಾಗುತ್ತಾರೆ. ಮೌಲ್ವಿ ಅಬ್ದುಲ್ ರೆಹಮಾನ್ ಮುಹಿಯುದ್ದೀನ್ ಸಾಹಿಬ್ ಅವರ ಈ ಪ್ರಾರ್ಥನೆಯ ಬುನಾದಿಯು ಏನಾಗಿತ್ತು ಅಂದರೆ ಮೌಲ್ವಿ ನಜೀರ್ ಹುಸೇನ್ ದೆಹ್ಲವಿ ಮತ್ತು ಅವರ ಶಿಶ್ಯ ಮೌಲ್ವಿ ಅಬು ಸಈದ್ ಮುಹಮ್ಮದ್ ಹುಸೇನ್ ಬಟಾಲ್ವಿ ಮತ್ತು ಉಳಿದವರು ಮಿರ್ಝಾ ಸಾಹಿಬ್ ಅವರನ್ನು ಕಾಫಿರ್(ಅವಿಶ್ವಾಸಿ) ಎಂದು ಘೋಷಿಸಿದ್ದರು. ಅವರು ನಿಜವಗಿಯೂ ಕಾಫಿರ್ ಆಗಿದ್ದಾರೆಯೇ? ಅಲ್ಲಾಹನ ಮುಂದೆ ಅವನ ಸ್ಥಾನಮಾನವೇನು? ಆಗ ಅದರ ಉತ್ತರವಾಗಿ (ಒಂದುವೇಳೆ ನಾವು ಮುಹಿಯುದ್ದೀನ್‌ನ ಇಲ್‌ಹಾಮ್ ಅನ್ನು ನಿಜ ಎಂದು ನಂಬಿದರೆ) ಅಲ್ಲಾಹನು ಹೇಳಿದನು: **ಇನ್ನ ಫಿರ್‌ಔನ ವ ಹಾಮಾನ ವ ಜುನೂದಹುಮಾ ಕಾನೂ ಖಾತಿಈನ–** ಆದ್ದರಿಂದ, ನಾವು ಈ ಇಲ್‌ಹಾಮ್ ಅನ್ನು ಹೀಗೆ ಅರ್ಥಮಾಡಿಕೊಳ್ಳುತ್ತೆವೆ ಈ ಇಲ್‌ಹಾಮ್‌ನಲ್ಲಿ ಸರ್ವಶಕ್ತನಾದ ಅಲ್ಲಾಹನು ಎರಡು ಮೌಲವಿಗಳನ್ನು (ಅವರಿಬ್ಬರು ತಕ್ಫೀರ್‌ನ ಸಂಸ್ಥಾಪಕರಾಗಿದ್ದರು) ಫಿರ್‌ಔನ್ ಮತ್ತು ಹಾಮಾನ್ ಎಂದು ಹೆಸರಿಸಿದ್ದಾನೆ. ಅವರಿಬ್ಬರೂ ಮತ್ತು ಅವರ ಅನುಯಾಯಿಗಳು ತಕ್ಫೀರ್‌ನಲ್ಲಿ ತಪ್ಪಾಗಿದ್ದಾರೆ ಮತ್ತು ರೂಪಾಲಂಕಾರಗಳಲ್ಲಿ ಎಲ್ಲದಕ್ಕು ಮೊದಲು "ಕುಫರ್‌ನ ಫತ್ವ" (ಧರ್ಮಶಾಸ್ತ್ರ ವಿಧಿ) ನೀಡುವವನಿಗೆ ಫಿರ್‌ಔನ್ ಎಂದು ಕರೆಯಲಾಗಿದೆ ಮತ್ತು "ಇಸ್ತಿಫ್ತಾವನ್ನು" (ಧರ್ಮಶಾಸ್ತ್ರವಿಧಿಯನ್ನು ಬರೆಯುವವನು) ಬರೆದವನನ್ನು ಹಾಮಾನ್ ಎಂದು ಕರೆಯಲಾಯಿತು. ಪಂಜಾಬ್ ಮತ್ತು ಭಾರತದಲ್ಲಿ ಅವನ ತಕ್ಫೀರ್ ಅನ್ನು ಅನುಸರಿಸಿದ ಸಾವಿರಾರು ಮೌಲವಿಗಳು ಹಾಗೂ ಇತರರನ್ನು ಅವನ ಸೈನ್ಯ ಎಂದು ಕರೆಯಲಾಯಿತು. ಮೌಲ್ವಿ ಮುಹಿಯುದ್ದೀನ್ ದುರಾದೃಷ್ಟವಿಲ್ಲದಿದ್ದರೆ, ಈ ಅರ್ಥಗಳು ಬಹಳ ಸ್ಪಷ್ಟವಾಗಿರುತ್ತವೆ ಏಕೆಂದರೆ ಸಂಶೋಧನೆಯಿಲ್ಲದೆ ನನ್ನನ್ನು ನಾಶಮಾಡಲು ಪ್ರಯತ್ನಿಸಿದ ಜನರು ಅದನ್ನು ಅಳವಡಿಸಿಕೊಂಡರು ಮತ್ತು ನನ್ನ ಹಾಗೂ ಅದರ ಮೇಲೆ ಇನ್ನೊಬ್ಬರು ಬಿರುಗಾಳಿ ಎಬ್ಬಿಸಿದರು. ಮತ್ತು ಅದಕ್ಕೆ ಪುರಾವೆ ಎಂದರೆ ಬರಾಹೀನ್‌ನಲ್ಲಿ 26 ವರ್ಷಗಳ ಮುಂಚೆಯೇ ಇವರಿಬ್ಬರನ್ನು ಭವಿಷ್ಯವಾಣಿಯಂತೆ ಫಿರ್‌ಔನ್ ಮತ್ತು ಹಾಮಾನ್ ಎಂದು ಕರೆಯಲಾಗಿದೆ. ಆದ್ದರಿಂದ ಈ ಪತ್ಯವು ಬರಾಹೀನ್ ಅಹ್ಮದಿಯಾದಲ್ಲಿ ಪುಟ 510 ಮತ್ತು 511 ರಲ್ಲಿದೆ. **ವಇಝ್ ಯಮ್ಕುರು ಬಿಕಲ್ಲಝೀ ಕಫರ– ಔಖಿದ್ಲಿ ಯಾ ಹಾಮಾನು ಲಅಲ್ಲಿ ಅತ್ತಲಿಊ ಇಲಾ ಇಲಾಹಿ ಮೂಸಾ ವ ಇನ್ನೀ ಲಉಝುನ್ನುಹೂ ಮಿನಲ್ ಕಾಝಿಬೀನ್– ತಬ್ಬತ್ ಯದಾ ಅಬೀ**

*(ಪುಟ 08 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ನನ್ನನ್ನು ಬೈಅತ್ ಮಾಡುವುದರಿಂದ ಅಲ್ಲಾಹನು ಹೃದಯದ ಒಪ್ಪಿಗೆಯನ್ನು ಬಯಸುತ್ತಾನೆ. ಆದ್ದರಿಂದ ಯಾವನು ಸತ್ಯಹೃದಯದಿಂದ ನನ್ನನ್ನು ಸ್ವೀಕಾರ ಮಾಡುತ್ತಾನೋ ಮತ್ತು ತನ್ನ ಪಾಪಗಳಿಂದ ಸತ್ಯವಾಗಿಯೂ ಪಶ್ಚಾತ್ತಾಪ ಮಾಡುತ್ತಾನೋ ಆತನ ಪಾಪಗಳನ್ನು ಕ್ಷಮಿಸುವವನೂ ಕರುಣಾಮಯಿಯೂ ಆದ ಅಲ್ಲಾಹನು ಖಂಡಿತ ಕ್ಷಮಿಸುವನು. ಆತನು ತಾಯಿಯ ಹೊಟ್ಟೆಯಿಂದ ಹೊರಟ ಮಗುವಿನಂತೆ ಆಗುವನು. ಆಗ ದೇವದೂತರು ಆತನ ಸಂರಕ್ಷಣೆ ಮಾಡುತ್ತಾನೆ.

ಅಹ್ಮದಿಯರೊಂದಿಗೆ ಅಲ್ಲಾಹನು ಮಾಡಿರುವ ಅತಿದೊಡ್ಡ ಔದಾರ್ಯವೇನೆಂದರೆ, ಅವನು ನಮ್ಮನ್ನು ಕಾಲಘಟ್ಟದ ಇಮಾಂ ಮತ್ತು ಹಝ್ರತ್ ಪೈಗಂಬರ್(ಸ)ರ ಸತ್ಯಪ್ರೇಮಿಯಾದ ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬಲು ಸೌಭಾಗ್ಯ ನೀಡಿರುವನು.

ಅಲ್ಲಾಹನಿಗೆ ಧನ್ಯರಾಗುವುದು ಎಂದರೆ, ನಾವು ಅಲ್ಲಾಹನ ಆಜ್ಞೆಗಳ ಪ್ರಕಾರ ನಡೆಯುವುದು, ಸರಿಯಾದ ರೀತಿಯಲ್ಲಿ ಅಲ್ಲಾಹನ ಆರಾಧನೆ ಮಾಡುವುದು, ಅವನ ಸೃಷ್ಟಿಗಳಿಗೆ ಸಲ್ಲಿಸಬೇಕಾದ ಹಕ್ಕುಗಳನ್ನು ಸಲ್ಲಿಸುವುದು.

ಸಂಶಯಗಳಿಂದಲೂ ಊಹೆಗಳಿಂದಲೂ ತುಂಬಿರುವ ವಿಶ್ವಾಸದಿಂದ ಯಾವುದೇ ಉತ್ತಮ ಪ್ರಯೋಜನ ಉಂಟಾಗಲಾರದು. ಆದರೆ ನೀವು ಸತ್ಯಹೃದಯದಿಂದ ಮಸೀಹ್ ಮೌಊದ್ ನಿಜವಾಗಿಯೂ ತೀರ್ಪುಗಾರ ಎಂದು ಒಪ್ಪಿರುವುದಾದರೆ, ಅವರ ತೀರ್ಪು ಮತ್ತು ಕೃತ್ಯದ ಮುಂದೆ ತನ್ನೆಲ್ಲವನ್ನು ಕೆಳಗಿಳಿಸಿರಿ. ಅವರ ತೀರ್ಮಾನವನ್ನು ಗೌರವಭಾವದಿಂದ ನೋಡಿರಿ. ಹಾಗಾದರೆ, ನೀವು ಹಝ್ರತ್ ಪೈಗಂಬರ್(ಸ)ರ ಪರಿಶುದ್ಧ ಮಾತುಗಳನ್ನು ಗೌರವಿಸುವವರಾಗಿ ಗಣಿಸಲ್ಪಡುವಿರಿ.

ಖಿಲಾಫತಿನೊಂದಿಗೆ ಸಂಬಂಧ ಮತ್ತು ಅನುಸರಣೆಯ ಪ್ರತಿಜ್ಞೆಯನ್ನು ನಿಭಾಯಿಸುವುದು ಕೂಡ ಅಹ್ಮದಿಯರ ಕಡ್ಡಾಯ ಕರ್ತವ್ಯವಾಗಿದೆ. ಇಲ್ಲದಿದ್ದರೆ ಬೈಅತ್ ಅಪೂರ್ಣವಾಗುವುದು.

"ಈಗ ಚಿರಕಾಲ ಜೀವಿತಕ್ಕಾಗಿ ಅಲ್ಲಾಹನು ಸೃಷ್ಟಿಸಿದ ಕಾರಂಜಿಯ ಸಮೀಪಕ್ಕೆ ನೀವು ತಲುಪಿದ್ದೀರಿ ಎಂಬುದೂ ಸತ್ಯವಾಗಿದೆ."

ಈ ಲೋಕವು ನಮ್ಮನ್ನು ರಕ್ಷಿಸಲಾರದು. ನಮ್ಮ ಮತ್ತು ನಮ್ಮ ಮಕ್ಕಳ ಭವಿಷ್ಯವನ್ನು ಸುರಕ್ಷಿತಗೊಳಿಸಲಾರದು. ಬದಲಾಗಿ ನಾವು ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ರಸೂಲುಲ್ಲಾಹ್ ಎಂಬ ಕಲಿಮ ವಚನದ ಹಕ್ಕನ್ನು ಈಡೇರಿಸುವವರಾದರೆ, ಅಲ್ಲಾಹನು ನಮ್ಮ ವಿನಮ್ರತೆಯ ಪ್ರಾರ್ಥನೆಗಳ ಮತ್ತು ಉತ್ತಮ ಕೃತ್ಯಗಳ ಕಾರಣದಿಂದ ರಕ್ಷಿಸುವನು.

ಅದೇ ರೀತಿಯಲ್ಲಿ ಮನವರಿಕೆ ಮಾಡಿಕೊಟ್ಟರೂ ಹಝ್ರತ್ ಮಸೀಹ್ ಮೌಊದ್(ಅ)ರ ವಿರೋಧದಲ್ಲಿ ಮೃಗೀಯ ಸ್ವಭಾವದಿಂದ ದೂರ ಸರಿಯುವುದಿಲ್ಲವೆಂದಾದರೆ ಅವರೊಂದಿಗೂ ನಾವು ಸ್ನೇಹಸಂಬಂಧವಿರಿಸಲು ಸಾಧ್ಯವಲ್ಲ. ಯಾವನೇ ಅಹ್ಮದಿಯ ಅಭಿಮಾನಕ್ಕೆ ಅದನ್ನು ಸಹಿಸಲು ಸಾಧ್ಯವಲ್ಲ.

ನಾವು ಕಲಿಮ ಉಚ್ಚರಿಸುವಾಗ, ನಿಜವಾಗಿಯೂ ಸರ್ವೋನ್ನತನಾದ ಅಲ್ಲಾಹನು ನಮಗೆ ಎಲ್ಲರಿಗಿಂತ ಪ್ರಿಯವೇ? ಅವನ ಸಂಪ್ರೀತಿಯನ್ನು ಗಳಿಸುವುದೇ ನಮ್ಮ ಗುರಿಯೇ? ನಿಜವಾಗಿಯೂ ನಾವು ಅಲ್ಲಾಹನ ಆಜ್ಞೆಗಳನ್ನು ಪರಿಪೂರ್ಣವಾಗಿ ಅನುಸರಿಸುತ್ತಿದ್ದೇವೆಯೇ? ಎಂದು ನೋಡಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರೊಂದಿಗೆ ಮಾಡಿರುವಂತಃ ಬೈಅತ್ತಿನ ಹಕ್ಕುಗಳನ್ನು ಈಡೇರಿಸಲು ಮತ್ತು ನಮ್ಮ ಆಧ್ಯಾತ್ಮಿಕ ಮತ್ತು ನೈತಿಕ ಸ್ಥಿತಿಗಳನ್ನು ಉತ್ತಮಗೊಳಿಸಲು ಉಪದೇಶ

ಇಡೀ ಪ್ರಪಂಚವನ್ನು ವಿಪತ್ತಿನಿಂದ ರಕ್ಷಣೆಯಲ್ಲಿರುವುದಕ್ಕಾಗಿ ದುಆವಿನ ಕೋರಿಕೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಎಸ್.ಎ ನ ಮೇರಿಲ್ಯಾಂಡ್‌ನ **'ಮಸ್ಜಿದ್ ಬೈತುರ್ರಹ್ಮಾನ್'** ನಿಂದ **14–10–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ

اِيَّاكَ نَعْبُدُ وَاِيَّاكَ نَسْتَعِيْنُ ـ اِهْدِنَا الصِّرَاطَ الْمُسْتَقِيْمَ ـ

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

ಅಲ್ಲಾಹನು ನಿಮಗೆ ಈ ಪ್ರಗತಿ ಹೊಂದಿದ ದೇಶಕ್ಕೆ ಬರಲು ಸೌಭಾಗ್ಯ ನೀಡಿದನು ಎಂಬುದು ನಿಮ್ಮ ಮೇಲೆ, ಅಹ್ಮದಿಯಾ ಜಮಾಅತಿನ ಮೇಲೆ, ಈ ದೇಶದಲ್ಲಿ ಬಂದವರ ಮೇಲೆ ಅವನ ಬಹಳ ದೊಡ್ಡ ಔದಾರ್ಯವಾಗಿದೆ. ವಿಶೇಷವಾಗಿ ಕಳೆದ ಕೆಲವು ವರ್ಷಗಳಲ್ಲಿ ಪಾಕಿಸ್ತಾನದಿಂದ ಅನೇಕ ಅಹ್ಮದಿಯರು ಇಲ್ಲಿಗೆ ಬಂದಿರುವರು. ಈಗಲೂ ಬರುತ್ತಿದ್ದಾರೆ. ಏಕೆಂದರೆ, ಪಾಕಿಸ್ತಾನದಲ್ಲಿ ಅಹ್ಮದಿಯರ ಸ್ಥಿತಿ ಕಠಿಣವಾಗುತ್ತಾ ಹೋಗುತ್ತಿದೆ. ಆದ್ದರಿಂದ ಅಲ್ಲಿರುವುದು ಕಷ್ಟವಾಗಿ ಬಿಟ್ಟಿದೆ. ಅನೇಕ ಪೀಡಿತ ಅಹ್ಮದಿಯರಿಗೆ ಅಮೇರಿಕದಲ್ಲಿ ಇರಲು ಅನುಮತಿ ಕೊಟ್ಟ ಕಾರಣದಿಂದ ಇಲ್ಲಿನ ಆಡಳಿತಗಳಿಗೆ ನಾವು ಧನ್ಯರಾಗಿರಬೇಕು. ಅವರಿಗೆ ಕೃತಜ್ಞತೆ ಅರ್ಪಿಸಬೇಕು. ಆದರೆ ಅಹ್ಮದಿಯರೊಂದಿಗೆ ಅಲ್ಲಾಹನು ಮಾಡಿರುವ ಅತಿದೊಡ್ಡ ಔದಾರ್ಯವೇನೆಂದರೆ, ಅವನು ನಮ್ಮನ್ನು ಕಾಲಘಟ್ಟದ ಇಮಾಂ ಮತ್ತು ಹಝ್ರತ್ ಪೈಗಂಬರ್(ಸ)ರ ಸತ್ಯಪ್ರೇಮಿಯಾದ ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬಲು ಸೌಭಾಗ್ಯ ನೀಡಿರುವನು.

ಅದಕ್ಕಾಗಿ ನಾವು ಅಲ್ಲಾಹನಿಗೆ ಎಷ್ಟು ಕೃತಜ್ಞತೆ ಅರ್ಪಿಸಿದರೂ ಅದು ಕಡಿಮೆ. ಅಲ್ಲಾಹನಿಗೆ ಧನ್ಯರಾಗುವುದು ಎಂದರೆ, ನಾವು ಅಲ್ಲಾಹನ ಆಜ್ಞೆಗಳ ಪ್ರಕಾರ ನಡೆಯುವುದು, ಸರಿಯಾದ ರೀತಿಯಲ್ಲಿ ಅಲ್ಲಾಹನ ಆರಾಧನೆ ಮಾಡುವುದು, ಅವನ ಸೃಷ್ಟಿಗಳಿಗೆ ಸಲ್ಲಿಸಬೇಕಾದ ಹಕ್ಕುಗಳನ್ನು ಸಲ್ಲಿಸುವುದು. ನಾವು ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಮಾಡಿದ ಬೈಅತ್ತಿನ ಹಕ್ಕುಗಳನ್ನು ಈಡೇರಿಸುವಾಗಲೇ ಇವೆಲ್ಲವೂ ಸಾಧ್ಯ. ಏಕೆಂದರೆ, ಹಝ್ರತ್ ಮುಹಮ್ಮದ್(ಸ)ರ ಭವಿಷ್ಯವಾಣಿ ಪ್ರಕಾರ ಇಸ್ಲಾಮಿನ ನಿಜವಾದ ಅಧ್ಯಾಪನೆಗಳ ಮೇಲೆ ನಮ್ಮನ್ನು ನಡೆಸಿದ ಮಾರ್ಗದರ್ಶಿ ಹಝ್ರತ್ ಮಸೀಹ್ ಮೌಊದ್(ಅ) ಅವರೇ ಆಗಿರುವರು.

ಆದ್ದರಿಂದ ಈ ಸಂಗತಿಯನ್ನು ಪ್ರತಿಯೊಬ್ಬ ಅಹ್ಮದಿಯು ತನ್ನ ಮುಂದಿರಿಸಬೇಕು. ಈಗ ನೈಜ ಇಸ್ಲಾಮಿನ ಪಾಠ ನಮಗೆ ಹಝ್ರತ್ ಮಸೀಹ್ ಮೌಊದ್(ಅ)ರ ಮೂಲಕವೇ ಲಭಿಸುವುದು. ಏಕೆಂದರೆ, ಈ

ಕಾಲದಲ್ಲಿ ಪವಿತ್ರ ಖುರ್‌ಆನಿನ ಅರಿವು ಮತ್ತು ಜ್ಞಾನವನ್ನು ಹಾಗೂ ಇಸ್ಲಾಮಿನ ಯಥಾರ್ಥ ತಿಳಿವನ್ನು ಅಲ್ಲಾಹನು ಅವರಿಗೆ ನೀಡಿರುವನು. ಅವರೇ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್(ಸ)ರ ಯಥಾರ್ಥ ಪ್ರೇಮಿಯಾಗಿರುವರು. ಅವರೇ ಹಝ್ರತ್ ಪೈಗಂಬರ್(ಸ)ರ ಬೋಧನೆ ಮತ್ತು ಸುನ್ನತ್ ಪ್ರಕಾರ ತನ್ನ ಜಮಾಅತಿನ ತರಬೇತಿ ಮಾಡಲು ಬಯಸುತ್ತಾರೆ. ಆದ್ದರಿಂದ ನಾವು ಯಥಾರ್ಥ ಮುಸ್ಲಿಮರಾಗಲಿಕ್ಕಾಗಿ ಈಗ ಹಝ್ರತ್ ಮಸೀಹ್ ಮೌಊದ್(ಅ)ರ ಕಡೆಗೆ ನೋಡಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದ ಪ್ರಕಾರ ತಮ್ಮ ಜೀವಿತವನ್ನು ಮಾಡಬೇಕಾಗುವುದು. ನಮ್ಮ ವಿಶ್ವಾಸವನ್ನು ಸುದೃಢಗೊಳಿಸಬೇಕಾಗುವುದು. ಅವರ ಆಗಮನದ ಮೇಲೆ ನಂಬಿಕೆ ಮತ್ತು ಪರಿಪೂರ್ಣವಾದ ದೃಢವಿಶ್ವಾಸ ಹೊಂದಬೇಕಾಗುವುದು. ಅವರನ್ನು ಹಕಂ ಮತ್ತು ಅದಲ್, ಎಂದರೆ, ನಿಜವಾದ ತೀರ್ಪುಗಾರ ಮತ್ತು ನ್ಯಾಯಧೀಶನೆಂದು ನಂಬಬೇಕಾಗುವುದು. ಈಗ ಅವರು ಹೇಳಿದ ಮಾರ್ಗದಲ್ಲಿ ಹೋಗಿಕೊಂಡೇ ಮನುಷ್ಯನು ಇಸ್ಲಾಮಿನ ನೈಜ ಅಧ್ಯಾಪನೆಗಳ ಮೇಲೆ ನಡೆಯಬಹುದಾಗಿದೆ ಎಂದು ದೃಢವಿಶ್ವಾಸ ಹೊಂದಬೇಕು.

ತನ್ನ ಮೇಲೆ ಪರಿಪೂರ್ಣವಾದ ವಿಶ್ವಾಸ ಮತ್ತು ನಂಬಿಕೆ ಇರಿಸಿ ಬೈಅತ್ ಮಾಡಿದವರನ್ನು ಉಪದೇಶಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ನಂಬಿಕೆ ಕೈಗೊಂಡ ವ್ಯಕ್ತಿಯು ತನ್ನ ನಂಬಿಕೆಯನ್ನು ದೃಢವಿಶ್ವಾಸ ಮತ್ತು ದೃಢಜ್ಞಾನದ ಮಟ್ಟಕ್ಕೆ ಏರಿಸಬೇಕಾಗಿದೆ. ಕೇವಲ ನಂಬಿಕೆ ಹೊಂದುವುದು ಮಾತ್ರವಲ್ಲ, ಅದರ ಮೇಲೆ ದೃಢವಾದ ವಿಶ್ವಾಸವು ಇರಬೇಕು. ಅದರ ಬಗ್ಗೆ ದೃಢಜ್ಞಾನವನ್ನೂ ಗಳಿಸಬೇಕು. ಏಕೆಂದರೆ, ನಾವು ಬೈಅತ್ ಮಾಡುತ್ತಿದ್ದೇವೆ. ಅನಂತರ ಸಂಶಯಕ್ಕೆ ಸಿಲುಕುವುದು ಸರಿಯಲ್ಲ. ಇವೆಲ್ಲವೂ ಏಕೆ ಎಂಬ ಸವಾಲುಗಳು ಏಳುವ ಸ್ಥಿತಿ ಉಂಟಾಗಬಾರದು. ಸಂಶಯವು ಪ್ರಯೋಜನಕಾರಿಯಲ್ಲ. ಸಂಶಯದಿಂದ ಸತ್ಯದ ಬಗ್ಗೆ ಏನೂ ತಿಳಿಯಲಾಗದು ಎಂದು ಅಲ್ಲಾಹನು ಸ್ವತಃ ಹೇಳುತ್ತಾನೆ. **ಇನ್ನ ಝ್ಝನ್ನ ಲಾ ಯುಗ್‌ನಿ ಮಿನಲ್ ಹಖ್ಖಿ ಶೈಅನ್** (ಯೂನುಸ್:37) ದೃಢವಿಶ್ವಾಸದಿಂದಲೇ ಮನುಷ್ಯನು ಯಶಸ್ಸು ಗಳಿಸುತ್ತಾನೆ. ದೃಢವಿಶ್ವಾಸವಿಲ್ಲದೇ ಏನೂ ಲಭಿಸದು. ಮನುಷ್ಯನು ಪ್ರತಿಯೊಂದು ಸಂಗತಿಗಳ ಬಗ್ಗೆ ಸಂಶಯಪಟ್ಟರೆ, ಒಂದು ಕ್ಷಣವೂ ಮುಂದಕ್ಕೆ ಸಾಗಲಾರನು. ನೀರಿನಲ್ಲಿ ವಿಷವಿದೆಯೆಂದು ಭಾವಿಸಿ ಅವನಿಗೆ ನೀರು ಕುಡಿಯಲು ಸಾಧ್ಯವಿಲ್ಲ. ಮಾರುಕಟ್ಟೆಯಲ್ಲಿ ಇರುವ ವಸ್ತುಗಳಲ್ಲಿ ಮಾರಕವಾದ ಏನಾದರೂ ಇರಬಹುದು ಎಂದು ಹೇಳಿ ಅದನ್ನು ಅವನಿಗೆ ತಿನ್ನಲಾಗದು. ಹಾಗಾದರೆ ಅವನು ಹೇಗೆ ಜೀವಿಸಲು ಸಾಧ್ಯ. ಜೀವಿತವನ್ನು ಸಾಗಿಸುವುದೇ ಕಷ್ಟಸಾಧ್ಯವಾಗುವುದು. ಇದೊಂದು ಸ್ಪಷ್ಟವಾದ ಉದಾಹರಣೆಯಾಗಿದೆ. ಅದೇ ರೀತಿಯಲ್ಲಿ ಈ ಉದಾಹರಣೆಯಿಂದ ಮನುಷ್ಯನು ತನ್ನ ಆಧ್ಯಾತ್ಮಿಕ ವಿಷಯಗಳಲ್ಲಿ ಪಾಠ ಕಲಿಯಬಹುದಾಗಿದೆ. ಈಗ ನೀವು ಸ್ವತಃ ಆಲೋಚಿಸಿರಿ ಮತ್ತು ತೀರ್ಮಾನ ಮಾಡಿರಿ. ನನ್ನ ಕೈಯಲ್ಲಿ ಬೈಅತ್ ಮಾಡಿಕೊಂಡು ನನ್ನನ್ನು ಮಸೀಹ್ ಮೌಊದ್ ಹಾಗೂ ಹಕಂ ಅದಲ್ ಎಂದು ನಂಬಿದ ನಂತರ ನನ್ನ ಯಾವುದಾದರೂ ತೀರ್ಪು ಅಥವಾ ಕೃತ್ಯದ ಬಗ್ಗೆ ನಿಮಗೆ ಸಂಶಯ ಅಥವಾ ದುಃಖ ಉಂಟಾಗುವುದಾದರೆ, ನಿಮ್ಮ ವಿಶ್ವಾಸದ ಬಗ್ಗೆ ಚಿಂತಿಸಬೇಕಾಗಿದೆ.

ಸಂಶಯಗಳಿಂದಲೂ ಊಹೆಗಳಿಂದಲೂ ತುಂಬಿರುವ ವಿಶ್ವಾಸದಿಂದ ಯಾವುದೇ ಉತ್ತಮ ಪ್ರಯೋಜನ ಉಂಟಾಗಲಾರದು. ಆದರೆ ನೀವು ಸತ್ಯಹೃದಯದಿಂದ ಮಸೀಹ್ ಮೌಊದ್ ನಿಜವಾಗಿಯೂ ತೀರ್ಪುಗಾರ ಎಂದು ಒಪ್ಪಿರುವುದಾದರೆ, ಅವರ ತೀರ್ಪು ಮತ್ತು ಕೃತ್ಯದ ಮುಂದೆ ತನ್ನೆಲ್ಲವನ್ನು ಕೆಳಗಿಳಿಸಿರಿ. ಅವರ ತೀರ್ಮಾನವನ್ನು ಗೌರವಭಾವದಿಂದ ನೋಡಿರಿ. ಹಾಗಾದರೆ, ನೀವು ಹಝ್ರತ್ ಪೈಗಂಬರ್(ಸ)ರ ಪರಿಶುದ್ಧ ಮಾತುಗಳನ್ನು ಗೌರವಿಸುವವರಾಗಿ ಗಣಿಸಲ್ಪಡುವಿರಿ.

ನನಗೆ ಹಝ್ರತ್ ಪೈಗಂಬರ್(ಸ)ರ ಸಾಕ್ಷ್ಯ ಸಾಕು. ಆಗಮಿಸಲಿರುವ ಮಸೀಹ್ ಮೌಊದ್ ನಿಮ್ಮ ಮಾರ್ಗದರ್ಶಿ ಮತ್ತು ನೇತಾರ ಆಗಿರುವರು ಹಾಗೂ ತೀರ್ಪುಗಾರ ಮತ್ತು ನ್ಯಾಯಧೀಶ ಆಗಿರುವರು ಎಂದು ಹಝ್ರತ್ ಪೈಗಂಬರ್(ಸ) ನಮಗೆ ಸಾಂತ್ವನ ನೀಡಿರುವರು. ಇದರಿಂದ ಸಾಂತ್ವನಗೊಳ್ಳದಿದ್ದರೆ ಮತ್ತೆ ಯಾವಾಗ ನಿಮಗೆ ಸಮಾಧಾನ ಉಂಟಾಗುವುದು. ವಿಶ್ವಾಸವು ಇದ್ದು ಅದರೊಂದಿಗೆ ಹೃದಯದ ಕೆಲವೆಡೆ ಸಂಶಯಗಳೂ ಇರುವುದು ಖಂಡಿತ ಗುಣಕರವಲ್ಲ. ಯಾರು ನನ್ನನ್ನು ನಿರಾಕರಿಸಿದರೋ ಮತ್ತು ನನ್ನ ಮೇಲೆ ಆಕ್ಷೇಪವೆತ್ತುತ್ತಾರೋ ಅವರು ನನ್ನನ್ನು ಗುರುತಿಸಿಲ್ಲ. ಆದರೆ ಯಾರು ನನ್ನನ್ನು ನಂಬಿದ ನಂತರವೂ ಮನಸ್ಸಿನಲ್ಲಿ ಆಕ್ಷೇಪ ಇರಿಸಿದ್ದಾರೋ ಅವರು ದೌರ್ಭಾಗ್ಯಶಾಲಿಗಳು. ಏಕೆಂದರೆ ಅವರು ನೋಡಿದ ನಂತರ ಕುರುಡರಾದರು. (ಮಲ್‌ಫೂಝಾತ್, ಸಂಪುಟ–3, ಪುಟ–73–74) ಇದಾಗಿರಬೇಕು ನಮ್ಮ ವಿಶ್ವಾಸದ ಮಟ್ಟ.

ಹಝ್ರತ್ ಮಸೀಹ್ ಮೌಊದ್(ಅ)ರೇ ತನ್ನ ನಂತರ ಖಿಲಾಫತ್ ಜಾರಿಯಲ್ಲಿರುವುದಾಗಿ ತಿಳಿಸಿದ್ದರು. (ಅಲ್‌ವಸಿಯ್ಯತ್, ರೂಹಾನಿ ಖಝಾಇನ್, ಸಂಪುಟ–20, ಪುಟ–306) ಮತ್ತು ಹಝ್ರತ್ ಮಸೀಹ್ ಮೌಊದ್(ಅ) ಮಾತ್ರವಲ್ಲ, ಹಝ್ರತ್ ಪೈಗಂಬರ್(ಸ) ಕೂಡ ಮಹ್‌ದಿ ಮಸೀಹ್‌ರ ಆಗಮನದ ಜೊತೆಗೆ ಖಿಲಾಫತ್ ವ್ಯವಸ್ಥೆ ಖಿಯಾಮತ್ ತನಕ ಮುಂದುವರೆಯುವುದಾಗಿ ಸುವಾರ್ತೆ ನೀಡಿದ್ದರು. (ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–6, ಪುಟ–285, ಮಸ್ನದ್ ನುಮಾನ್ ಬಿನ್ ಬಶೀರ್, ಹದೀಸ್–18596, ಆಲಿಮುಲ್ ಕುತುಬ್ ಬೈರೂತ್ 1998) ಮತ್ತು ಅಹ್ಮದಿಯಾ ಖಿಲಾಫತ್ ಎಂಬುದು ಹಝ್ರತ್ ಮಸೀಹ್ ಮೌಊದ್(ಅ)ರ ಮಾರ್ಗವನ್ನೇ ಜಾರಿಯಲ್ಲಿರಿಸುವ ವ್ಯವಸ್ಥೆಯಾಗಿದೆ. ಹಕಂ ಮತ್ತು ಅದಲ್ ಆದ ಮಸೀಹ್‌ರ ತೀರ್ಮಾನಗಳನ್ನು ಜಾರಿಯಲ್ಲಿರಿಸುವ ವ್ಯವಸ್ಥೆಯಾಗಿದೆ. ತಮ್ಮ ಪ್ರತಿಜ್ಞೆಯಲ್ಲಿ ಪ್ರತಿಯೊಬ್ಬ ಅಹ್ಮದಿಯು ಖಿಲಾಫತಿನೊಂದಿಗೆ ಹೊಂದಿಕೊಂಡಿರುವುದಾಗಿ ಮತ್ತು ಅನುಸರಣೆ ಮಾಡುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಆದ್ದರಿಂದ ಈ ದೃಷ್ಟಿಯಲ್ಲಿ ಖಿಲಾಫತಿನೊಂದಿಗೆ ಸಂಬಂಧ ಮತ್ತು ಅನುಸರಣೆಯ ಪ್ರತಿಜ್ಞೆಯನ್ನು ನಿಭಾಯಿಸುವುದು ಕೂಡ ಅಹ್ಮದಿಯರ ಕಡ್ಡಾಯ ಕರ್ತವ್ಯವಾಗಿದೆ. ಇಲ್ಲದಿದ್ದರೆ ಬೈಅತ್ ಅಪೂರ್ಣವಾಗುವುದು. ಆದ್ದರಿಂದ ಈ ರೀತಿಯಲ್ಲೂ ತನ್ನ ನಂಬಿಕೆ ಮತ್ತು ದೃಢವಿಶ್ವಾಸವನ್ನು ವರ್ಧಿಸಲು ಪ್ರತಿಯೊಬ್ಬ ಅಹ್ಮದಿ ಸದಾ ಪ್ರಯತ್ನ ಮಾಡುತ್ತಾ ಇರಬೇಕು.

ಪವಿತ್ರ ಖುರ್‌ಆನನ್ನು ಗಮನವಿಟ್ಟು ಓದಲು ಮತ್ತು ಮನವರಿಕೆ ಮಾಡುವುದರ ಕಡೆಗೆ ಗಮನಹರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನನ್ನೊಂದಿಗೆ ಸಂಬಂಧವಿರಿಸಿಕೊಂಡವರೊಡನೆ ನಾನು ಪದೇ ಪದೇ ಉಪದೇಶಿಸುವುದೇನೆಂದರೆ, ಅಲ್ಲಾಹನು ಈ ಜಮಾಅತನ್ನು ಸತ್ಯವನ್ನು ಬಯಲುಮಾಡಲು ಸ್ಥಾಪಿಸಿದ್ದಾನೆ. ಏಕೆಂದರೆ, ಅದಿಲ್ಲದಿದ್ದರೆ ಕರ್ಮಪರವಾದ ಜೀವಿತದಲ್ಲಿ ಯಾವುದೇ ಪ್ರಕಾಶ ಮತ್ತು ಬೆಳಕು ಉಂಟಾಗಲಾರದು. ಕರ್ಮಪರವಾದ ಸತ್ಯತೆಯ ಮೂಲಕ ಇಸ್ಲಾಮಿನ ಶ್ರೇಷ್ಠತೆ ಲೋಕದಲ್ಲಿ ಪ್ರಕಟಗೊಳ್ಳಬೇಕೆಂದು ನಾನು ಬಯಸುತ್ತೇನೆ. ಅಲ್ಲಾಹನು ನನ್ನನ್ನು ಈ ಕೆಲಸಕ್ಕಾಗಿಯೇ ಕಳುಹಿಸಿದ್ದಾನೆ. ಆದ್ದರಿಂದ ಪವಿತ್ರ ಖುರ್‌ಆನನ್ನು ಹೆಚ್ಚಾಗಿ ಓದಿರಿ. ಆದರೆ ಕೇವಲ ಕಥೆಯೆಂದು ಭಾವಿಸಿಕೊಂಡಲ್ಲ. ಬದಲಾಗಿ ಒಂದು ತತ್ವಜ್ಞಾನವೆಂದು ಮನವರಿಕೆ ಮಾಡಿಕೊಂಡು.

(ಮಲ್‌ಫೂಝಾತ್, ಸಂಪುಟ–3, ಪುಟ–155, 1984 ಆವೃತ್ತಿ)

ಆದ್ದರಿಂದ ನಮ್ಮಲ್ಲಿ ಪ್ರತಿಯೊಬ್ಬರು ತಮ್ಮ ಅವಲೋಕನ ನಡೆಸಬೇಕು. ಲೌಕಿಕ ಕೆಲಸಗಳಲ್ಲಿ ಮುಳುಗಿ ನಾವು ಬೈಅತ್ತಿನ ಉದ್ದೇಶವನ್ನು ಮರೆತುಬಿಟ್ಟಿದ್ದೇವೆಯೇ ಎಂದು ನೋಡಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಪವಿತ್ರ ಖುರ್‌ಆನಿನ ಅರಿವು, ಜ್ಞಾನ ಮತ್ತು ಆಜ್ಞೆಗಳನ್ನು ಮನವರಿಕೆ ಮಾಡಿಸಲು ಮತ್ತು ಅದರಂತೆ ನಡೆಯುವಂತೆ ಮಾಡಲು ಅಲ್ಲಾಹನು ನನ್ನನ್ನು ಕಳುಹಿಸಿರುವನು ಹಾಗೂ ನನ್ನನ್ನು ಬೈಅತ್ ಮಾಡಿರುವವರು ಅದರ ಪ್ರಾಮುಖ್ಯತೆಯನ್ನು ಅರಿಯಬೇಕು ಮತ್ತು ಪವಿತ್ರ ಖುರ್‌ಆನಿನ ಅರಿವು ಮತ್ತು ಜ್ಞಾನದ ಬಗ್ಗೆ ಚಿಂತಿಸಬೇಕು. ಅದರ ಅರ್ಥ ಮತ್ತು ವ್ಯಾಖ್ಯಾನವನ್ನು ಅರಿಯಲು ಪ್ರಯತ್ನಿಸಬೇಕು. ನಾವು ಎಲ್ಲಿಯ ವರೆಗೂ ಹಝ್ರತ್ ಮಸೀಹ್ ಮೌಊದ್(ಅ)ರ ಆಧ್ಯಾತ್ಮಿಕ ಖಜಾನೆಯನ್ನು ಎಂದರೆ, ಗ್ರಂಥಗಳನ್ನು ಅರಿಯಲು ಮತ್ತು ಓದಲು ಪ್ರಯತ್ನಿಸುವುದಿಲ್ಲವೋ ಅಲ್ಲಿಯ ವರೆಗೂ ಇದು ಸಾಧ್ಯವಲ್ಲ. ಪವಿತ್ರ ಖುರ್‌ಆನ್ ಯಾವುದೇ ಕಥೆಯಲ್ಲ, ಬದಲಾಗಿ ಜೀವಿತಕ್ಕೆ ಬೇಕಾಗಿರುವ ಮಾರ್ಗಸೂಚಿಯಾಗಿದೆ.

ಅದರ ಪ್ರಕಾರ ನಡೆಯುವುದು ಪ್ರತಿಯೊಬ್ಬ ಅಹ್ಮದಿಯ ಕಡ್ಡಾಯ ಕರ್ತವ್ಯವಾಗಿದೆ.

ನಾವು ಪ್ರಗತಿಹೊಂದಿದ ದೇಶಗಳಿಗೆ ಬಂದು ಈ ಉದ್ದೇಶವನ್ನು ಮರೆತುಕೊಂಡು ಲೌಕಿಕ ಕೆಲಸಗಳಲ್ಲಿ ಮುಳುಗಿಕೊಂಡು ತಮ್ಮ ಮನೆಗಳ ವಾತಾವರಣವನ್ನು ಪವಿತ್ರ ಖುರ್‌ಆನಿನ ಬೋಧನೆಗಳ ಪ್ರಕಾರ ಮಾಡಲು ಪ್ರಯತ್ನಿಸುವುದಿಲ್ಲವೆಂದಾದರೆ, ನಮ್ಮ ಮಕ್ಕಳು ಮತ್ತು ನಮ್ಮ ಸಂತಾನಗಳು ಧರ್ಮದಿಂದ ದೂರಹೋಗುವರು. ಇದು ಕೃತಜ್ಞತೆ ಅರ್ಪಿಸುವುದಕ್ಕೆ ಬದಲಾಗಿ ಅಲ್ಲಾಹನ ಅನುಗ್ರಹಗಳನ್ನು ನಿರಾಕರಿಸುವ ಸಂಗತಿಯಾಗುವುದು. ಆದ್ದರಿಂದ ಬಹಳವಾಗಿ ಚಿಂತಿಸಬೇಕಾದ ಮತ್ತು ಯೋಚಿಸಬೇಕಾದ ಆವಶ್ಯಕತೆಯಿದೆ. ಅಲ್ಲಾಹನ ಸಾಮೀಪ್ಯ, ಅವನ ಆರಾಧನೆಯ ಹಕ್ಕನ್ನು ಈಡೇರಿಸುವುದು, ಅವನ ಗ್ರಂಥವನ್ನು ಓದುವುದು, ಮನವರಿಕೆ ಮಾಡುವುದು, ಅದರ ಪ್ರಕಾರ ನಡೆಯುವುದು ಪ್ರತಿಯೊಬ್ಬ ಅಹ್ಮದಿಯ ಮುಖ್ಯವಾದ

ಗುರಿಯಾಗಬೇಕು. ಆಗಲೇ ನಾವು ಬೈಅತ್ತಿನ ಹಕ್ಕನ್ನು ಈಡೇರಿಸುವವರಾಗುವೆವು.

ವಲಸೆ ಬಂದವರು ಲೌಕಿಕವಾದ ವಿರೋಧದಿಂದ ರಕ್ಷಣೆ ಪಡೆದು ಇಲ್ಲಿಗೆ ಬಂದಿರುವರು. ಆದರೆ ಧರ್ಮದ ಪ್ರಕಾರ ನಡೆಯುವುದಿಲ್ಲವಾದರೆ, ಪವಿತ್ರ ಖುರ್‌ಆನನ್ನು ಮನವರಿಕೆ ಮಾಡುವುದಿಲ್ಲವಾದರೆ ಅಲ್ಲಾಹನ ಅನುಗ್ರಹಗಳ ವಾರಸುದಾರರಾಗಲು ಸಾಧ್ಯವಿಲ್ಲ. ಅದೇ ರೀತಿಯಲ್ಲಿ ಹೊಸದಾಗಿ ಅಹ್ಮದಿಯಾದವರು ಮತ್ತು ಹಳೆಯ ಅಹ್ಮದಿಯರು ನೆನಪಿಡಬೇಕಾದ ಸಂಗತಿಯೇನಂದರೆ, ಕೇವಲ ಬೈಅತ್ ಮಾಡುವುದರಿಂದ ಉದ್ದೇಶ ಈಡೇರುವುದಿಲ್ಲ. ನಾವು ಇಸ್ಲಾಮಿನ ಪಾಠಗಳ ಪ್ರಕಾರ ನಡೆಯುವವರಾಗುವಾಗಲೇ ಉದ್ದೇಶಸಿದ್ಧಿಯಾಗುವುದು. ನಾವು ಪವಿತ್ರ ಖುರ್‌ಆನನ್ನು ಓದುವ ಮತ್ತು ಮನವರಿಕೆ ಮಾಡುವ ತನಕ ಇದು ಸಾಧ್ಯವಲ್ಲ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಾನು ಸತ್ಯವಾಗಿಯೂ ಹೇಳುತ್ತೇನೆ. ಇದು ಅಲ್ಲಾಹನು ಸೌಭಾಗ್ಯಶಾಲಿಗಳಿಗೆ ಮಾಡಿರುವ ಏರ್ಪಾಡಾಗಿದೆ. ಅದರಿಂದ ಪ್ರಯೋಜನ ಪಡೆಯುವವರೇ ಅನುಗ್ರಹೀತರು. ಗಳಿಸಬೇಕಾದದ್ದು ಗಳಿಸಿಯಾಗಿದೆ ಎಂದು ನನ್ನೊಂದಿಗೆ ಸಂಬಂಧವಿರಿಸಿಕೊಂಡವರು ಖಂಡಿತ ಜಂಬಕೊಚ್ಚಬಾರದು. ತಮ್ಮ ಕಠಿನ ವಿರೋಧದ ಮೂಲಕ ಅಲ್ಲಾಹನ ಕೋಪಕ್ಕೆ ಕಾರಣರಾದ ವಿರೋಧಿಗಳಿಗಿಂತ ನೀವು ಭಾಗ್ಯವಂತರು ಎಂಬುದು ಸತ್ಯವೇ ಆಗಿದೆ. ನೀವು ಉತ್ತಮ ವಿಶ್ವಾಸದೊಂದಿಗೆ ಅಲ್ಲಾಹನ ಕೋಪದಿಂದ ರಕ್ಷಣೆ ಪಡೆದಿರುವಿರಿ ಎಂಬುದೂ ಸತ್ಯವೇ ಆಗಿದೆ. ಈಗ ಚಿರಕಾಲ ಜೀವಿತಕ್ಕಾಗಿ ಅಲ್ಲಾಹನು ಸೃಷ್ಟಿಸಿದ ಕಾರಂಜಿಯ ಸಮೀಪಕ್ಕೆ ನೀವು ತಲುಪಿದ್ದೀರಿ ಎಂಬುದೂ ಸತ್ಯವಾಗಿದೆ. ಆದರೆ ನೀರು ಕುಡಿಯುವ ಕೆಲಸ ಮಾತ್ರ ಬಾಕಿಯಿದೆ.

ನಿಮ್ಮ ಬಾಯಾರಿಕೆಯನ್ನು ನೀಗಿಸುವ ಸೌಭಾಗ್ಯ ನೀಡಲು ಅಲ್ಲಾಹನಿಂದ ಶಕ್ತಿ ಯಾಚಿಸಿರಿ. ಏಕೆಂದರೆ, ಅಲ್ಲಾಹನ ಸಹಾಯವಿಲ್ಲದೇ ಏನೂ ಸಾಧ್ಯವಾಗದು. ಅಲ್ಲಾಹನ ಕೃಪೆಯಿಲ್ಲದಿದ್ದರೆ ಏನೂ ಸಾಧ್ಯವಲ್ಲ. ಆದ್ದರಿಂದ ಅಲ್ಲಾಹನ ಕೃಪೆಯನ್ನು ಯಾವಾಗಲೂ ಯಾಚಿಸಿರಿ. ಯಾರು ಈ ಚಿಲುಮೆಯಿಂದ ನೀರು ಕುಡಿಯುತ್ತಾನೋ ಅವನು ನಾಶ ಹೊಂದಲಾರನು ಎಂದು ನಾನು ಖಂಡಿತ ಬಲ್ಲೆನು. ಏಕೆಂದರೆ ಇದು ಜೀವದಾಯಕ ನೀರಾಗಿದೆ ಮತ್ತು ನಾಶದಿಂದ ರಕ್ಷಣೆ ನೀಡುತ್ತದೆ. ಅದು ಶೈತಾನಿನ ದಾಳಿಗಳಿಂದ ಸುರಕ್ಷಿತಗೊಳಿಸುತ್ತದೆ. ಈ ಚಿಲುಮೆಯಿಂದ ಯಥೇಷ್ಟವಾಗಿ ಕುಡಿಯಲು ಇರುವ ಮಾರ್ಗವೇನು? ಅದೇನೆಂದರೆ, ಅಲ್ಲಾಹನು ನಿಮ್ಮೊಡನೆ ಈಡೇರಿಸಲು ಹೇಳಿದ ಎರಡು ಕರ್ತವ್ಯಗಳನ್ನು ಈಡೇರಿಸಿರಿ. ಅವುಗಳಲ್ಲಿ ಒಂದು ದೇವನಿಗೆ ಸಲ್ಲಬೇಕಾದ ಕರ್ತವ್ಯಗಳಾಗಿವೆ. ಮತ್ತೊಂದು ದೇವನ ಸೃಷ್ಟಿಗಳಿಗೆ ಸಲ್ಲಬೇಕಾದ ಕರ್ತವ್ಯಗಳಾಗಿವೆ. **ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹ್** ಎಂದು ನೀವು ಶಹಾದತ್ ಕಲಿಮ ಮೂಲಕ ಒಪ್ಪುವ ರೀತಿಯಲ್ಲೇ ಅವನನ್ನು ಏಕನೂ ಸಹಭಾಗಿ ಇಲ್ಲದವನೂ ಎಂದೂ ತಿಳಿಯಿರಿ. ಇದು ಎಷ್ಟು ಸುಂದರ ವಾಕ್ಯ ಎಂದರೆ, ಇದನ್ನು ಯಹೂದಿಯರಿಗೋ ಕ್ರೈಸ್ತರಿಗೋ ವಿಗ್ರಹಾರಾಧಕರಿಗೋ ಕಲಿಸಲಾಗುತ್ತಿದ್ದರೆ ಮತ್ತು ಅವರು ಇದನ್ನು ಮನವರಿಕೆ ಮಾಡುತ್ತಿದ್ದರೆ ಅವರು ಖಂಡಿತ ನಾಶವಾಗುತ್ತಿರಲಿಲ್ಲ. ಈ ಒಂದು ಕಲಿಮ ವಚನ ಇಲ್ಲದ ಕಾರಣದಿಂದ ಅವರ ಮೇಲೆ ನಾಶ ಮತ್ತು ವಿಪತ್ತು ಬಂತು ಹಾಗೂ ಅವರ ಆತ್ಮಗಳು ಕುಷ್ಠಗೊಂಡು ನಾಶವಾದುವು. (ಮಲ್‌ಫೂಝಾತ್, ಸಂಪುಟ–3, ಪುಟ–184–185, 1984 ಆವೃತ್ತಿ)

ನೋಡಿರಿ, ನೀವು ಬೈಅತ್ ಮಾಡಿಕೊಂಡು ಈ ಕಾರಂಜಿಯ ಸಮೀಪಕ್ಕೆ ತಲುಪಿದ್ದೀರಿ ಎಂದು ಹೇಳಿಕೊಂಡು ಹಝ್ರತ್ ಮಸೀಹ್ ಮೌಊದ್(ಅ) ನಮಗೆ ಹೇಗೆ ಸಾಂತ್ವನ ನೀಡಿರುವರು. ಈ ನೀರನ್ನು ಕುಡಿಯುವುದಾದರೆ, ಅನುಗ್ರಹಕ್ಕೆ ಪಾತ್ರರಾಗುವಿರಿ. ನಿಮಗೆ ಆಧ್ಯಾತ್ಮಿಕ ನಾಶ ಉಂಟಾಗಲಾರದು ಎಂಬ ಈ ಖಾತರಿಯನ್ನು ಬಾಯಿಮಾತಿನ ಮಿತಿಯಲ್ಲಿ ಮಾತ್ರ ಇರಿಸದೇ ಅದರ ಪ್ರಕಾರ ನಡೆಯುವವರಿಗೆ ನೀಡಲಾಗುತ್ತಿದೆ. ಏಕೆಂದರೆ, ಹಝ್ರತ್ ಮಸೀಹ್ ಮೌಊದ್(ಅ)ರವರೇ ಪವಿತ್ರ ಖುರ್‌ಆನಿನ ಸಂದೇಶವನ್ನು ಮತ್ತು ಅಲ್ಲಾಹನ ಆಜ್ಞೆಗಳನ್ನು ಜಾರಿಗೊಳಿಸಲು ಆಗಮಿಸಿದ್ದರು. ಕೇವಲ ಬೈಅತ್ ಸಾಕಾಗಲಾರದು ಬದಲಾಗಿ, ನೀವು ಅದರ ಪ್ರಕಾರ ನಡೆಯಬೇಕೆಂದು ಅಲ್ಲಾಹನು ಇಚ್ಛಿಸುತ್ತಾನೆ. ಯಾವನು ಅದರ ಪ್ರಕಾರ ನಡೆಯುತ್ತಾನೋ ಅವನು ಅಲ್ಲಾಹನ ಅನುಗ್ರಹಗಳಿಂದ ವಂಚಿತಲಾಗಲಾರನು ಮತ್ತು ನಾಶಹೊಂದಲಾರನು. ಅಲ್ಲಾಹನಲ್ಲದೇ ಆರಾಧನೆಗೆ ಅರ್ಹನು ಬೇರೆ ಯಾರೂ ಇಲ್ಲವೆಂಬ ಶಹಾದತ್ ಕಲಿಮದ ವಚನ ನಿಮ್ಮ ಬಾಹ್ಯ ಮತ್ತು ಅಂತರಂಗದ ಶಬ್ದವಾಗುವಾಗಲೇ ಈ ಕರ್ಮಪರವಾದ ಸ್ಥಿತಿ ಉಂಟಾಗುವುದು. ಅಲ್ಲಾಹನಿಗಿಂತ ಹೆಚ್ಚು ಯಾರೂ ನಿಮಗೆ ಪ್ರಿಯವಾಗಬಾರದು. ಅಲ್ಲಾಹನ ಸಂಪ್ರೀತಿಯಲ್ಲದೇ ಯಾವುದೇ ಸಂಗತಿಯ ಬೇಡಿಕೆ ಇರಬಾರದು. ಅಲ್ಲಾಹನ ಆಜ್ಞೆಗಳನ್ನು ಪರಿಪೂರ್ಣವಾಗಿ ಅನುಸರಿಸುವಂತಾಗಬೇಕು. ಈಗ ನಮ್ಮಲ್ಲಿ ಪ್ರತಿಯೊಬ್ಬರು ಇದರ ಬಗ್ಗೆ ನೋಡಬಹುದಾಗಿದೆ. ನಾವು ಕಲಿಮ ಉಚ್ಚರಿಸುವಾಗ, ನಿಜವಾಗಿಯೂ ಸರ್ವೋನ್ನತನಾದ ಅಲ್ಲಾಹನು ನಮಗೆ ಎಲ್ಲರಿಗಿಂತ ಪ್ರಿಯವೇ? ಅವನ ಸಂಪ್ರೀತಿಯನ್ನು ಗಳಿಸುವುದೇ ನಮ್ಮ ಗುರಿಯೇ? ನಿಜವಾಗಿಯೂ ನಾವು ಅಲ್ಲಾಹನ ಆಜ್ಞೆಗಳನ್ನು ಪರಿಪೂರ್ಣವಾಗಿ ಅನುಸರಿಸುತ್ತಿದ್ದೇವೆಯೇ? ಎಂದು ನೋಡಬೇಕಾಗಿದೆ.

ನಮಾಝ್‌ಗಳ ಸಮಯವಾಗುವಾಗ ನಮಗೆ ನಮಾಝ್‌ಗಳನ್ನು ನಿರ್ವಹಿಸುವುದರ ಕಡೆಗೆ ಕೂಡಲೇ ಗಮನ ಹೋಗುವುದಿಲ್ಲವಾದರೆ, ನಾವು ನಮ್ಮ ಲೌಕಿಕವಾದ ಕೆಲಸಗಳನ್ನು ಬಿಟ್ಟುಕೊಂಡು ಅಲ್ಲಾಹನ ಕರೆಗೆ ಬೇಗನೇ ಸಿದ್ಧರಾಗಿಕೊಂಡು ನಮಾಝ್‌ಗಾಗಿ ಹಾಜರಾಗುವುದಿಲ್ಲವಾದರೆ, ನಾವು ನಾಲಗೆಯಿಂದ ಕಲಿಮ ಉಚ್ಚರಿಸುತ್ತಿದ್ದೇವೆ, ಆದರೆ ಗುಪ್ತವಾದ ಶಿರ್ಕ್ ನಮ್ಮ ಹೃದಯದಲ್ಲಿದೆ ಎಂದಾಯಿತು. ನಮ್ಮ ಲೌಕಿಕ ವ್ಯಾಪಾರ ಅಲ್ಲಾಹನ ಎದುರಾಗಿ ನಿಂತಿದೆ ಎಂದಾಯಿತು. ನನ್ನ ವ್ಯಾಪಾರದಲ್ಲಿ, ನನ್ನ ಕೆಲಸದಲ್ಲಿ ಅಲ್ಲಾಹನ ಕೃಪೆಯಿಂದಲೇ ಅನುಗ್ರಹ ಉಂಟಾಗುತ್ತದೆ ಎಂಬ ದೃಢವಿಶ್ವಾಸದಲ್ಲಿ ಒಬ್ಬ ಸತ್ಯವಿಶ್ವಾಸಿ ಇರುತ್ತಾನೆ ಮತ್ತು ಇರಬೇಕು. ಹೀಗಿರುವಾಗ ಲೌಕಿಕವಾದ ಕೆಲಸಗಳು ಅಲ್ಲಾಹನ ಕರೆಗೆ ಎದುರಾಗಿ ನಿಲ್ಲಲು ಹೇಗೆ ಸಾಧ್ಯ? ಹೀಗಾಗುತ್ತಿದೆ ಎಂದಾದರೆ, ನಾವು ಕಲಿಮದ ತಿರುಳನ್ನು ಮನವರಿಕೆ ಮಾಡಿಯೇ ಇಲ್ಲವೆಂದಾಯಿತು. ನಾವು ನಾಲಗೆಯಿಂದ ಒಪ್ಪಿದ್ದೇವೆ. ಆದರೆ ನಮ್ಮ ಕೃತ್ಯಗಳು ನಮ್ಮ ಒಪ್ಪಿಗೆಗೆ ಜೊತೆ ನೀಡುತ್ತಿಲ್ಲ. ನಾವು ನೀರಿನ ಚಿಲುಮೆಯ ಸಮೀಪಕ್ಕೆ ಬಂದಿದ್ದೇವೆ. ಆದರೆ ನೀರು ಕುಡಿಯಲಿಕ್ಕಾಗಿ ಕೈಯನ್ನು ಚಾಚುತ್ತಿಲ್ಲ. ಇದಾಗಿದೆ ಅವಸ್ಥೆ ಎಂದಾದರೆ, ಬೈಅತ್ತಿನ ಕರ್ತವ್ಯಗಳು ಈಡೇರಿಲ್ಲವೆಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳ ಕುರಿತು ಮಾತ್ರ ಕಲಿಮ ಶಹಾದತ್ ತಾಕೀತು ಮಾಡುವುದಿಲ್ಲ, ಬದಲಾಗಿ ಅಲ್ಲಾಹನ ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸಲು ಕೂಡ ತಾಕೀತು ಮಾಡುತ್ತದೆ. ಮನುಷ್ಯನು ಈ ಎರಡು ವಿಧಗಳ ಹಕ್ಕುಗಳನ್ನು ಈಡೇರಿಸುವಾಗಲೇ ಯಥಾರ್ಥ ಸತ್ಯವಿಶ್ವಾಸಿಯಾಗುತ್ತಾನೆ. ಆಗಲೇ ಒಬ್ಬ ನೈಜ ಅಹ್ಮದಿ ಮುಸ್ಲಿಮನು ಬೈಅತಿನ ಹಕ್ಕುಗಳನ್ನು ಈಡೇರಿಸುತ್ತಾನೆ. ಹಝ್ರತ್ ಮಸೀಹ್ ಮೌಊದ್(ಅ) ತನ್ನನ್ನು ಬೈಅತ್ ಮಾಡಿದವರನ್ನು ಉಪದೇಶಿಸುತ್ತಾ ಹೇಳುತ್ತಾರೆ:

ಲೌಕಿಕರಂತೆ ಇರುವರಾದರೆ, ನನ್ನ ಕೈಯಲ್ಲಿ ಪಶ್ಚಾತ್ತಾಪ ಮತ್ತು ತೌಬದ ಬೈಅತ್ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲ. ನನ್ನ ಕೈಯಲ್ಲಿ ತೌಬ ಮಾಡುವುದು ಒಂದು ಮರಣವನ್ನು ಆವಶ್ಯಪಡುತ್ತದೆ. ಇದರಿಂದ ನಿಮಗೆ ಹೊಸ ಜೀವಿತ ಮತ್ತು ಹೊಸ ಜನನ ಲಭಿಸುವುದು. ಬೈಅತ್ ಮಾಡಿದ ನಂತರ ನಿಮಗೊಂದು ಹೊಸ ಆಧ್ಯಾತ್ಮಿಕ ಜೀವಿತ ಲಭಿಸಬೇಕು. ಆಧ್ಯಾತ್ಮಿಕ ಜೀವಿತ ಲಭಿಸುವುದಿಲ್ಲವೆಂದಾದರೆ, ಅದೇ ಲೌಕಿಕವಾದ ಅಭಿಲಾಷೆಗಳು ಮತ್ತು ಆದ್ಯತೆಗಳು ಇರುವುದಾದರೆ, ಅಂತಹ ಬೈಅತ್ತಿನಿಂದ ಯಾವುದೇ ಪ್ರಯೋಜನವಿಲ್ಲ. "ಬೈಅತ್ ಮನಸ್ಸಾರೆ ಅಲ್ಲವಾದರೆ, ಅದರಿಂದ ಯಾವುದೇ ಪ್ರಯೋಜನವಿಲ್ಲ.

ನನ್ನನ್ನು ಬೈಅತ್ ಮಾಡುವುದರಿಂದ ಅಲ್ಲಾಹನು ಹೃದಯದ ಒಪ್ಪಿಗೆಯನ್ನು ಬಯಸುತ್ತಾನೆ. ಆದ್ದರಿಂದ ಯಾವನು ಸತ್ಯಹೃದಯದಿಂದ ನನ್ನನ್ನು ಸ್ವೀಕಾರ ಮಾಡುತ್ತಾನೋ ಮತ್ತು ತನ್ನ ಪಾಪಗಳಿಂದ ಸತ್ಯವಾಗಿಯೂ ಪಶ್ಚಾತ್ತಾಪ ಮಾಡುತ್ತಾನೋ ಆತನ ಪಾಪಗಳನ್ನು ಕ್ಷಮಿಸುವವನೂ ಕರುಣಾಮಯಿಯೂ ಆದ ಅಲ್ಲಾಹನು ಖಂಡಿತ ಕ್ಷಮಿಸುವನು. ಆತನು ತಾಯಿಯ ಹೊಟ್ಟೆಯಿಂದ ಹೊರಟ ಮಗುವಿನಂತೆ ಆಗುವನು. ಆಗ ದೇವದೂತರು ಆತನ ಸಂರಕ್ಷಣೆ ಮಾಡುತ್ತಾರೆ."

ಆತನು ಪೂರ್ಣವಾಗಿಯೂ ಕಳಂಕರಹಿತನಾಗಿರುತ್ತಾನೆ. ಮುಗ್ಧನಾಗುತ್ತಾನೆ. ಒಂದು ಗ್ರಾಮದಲ್ಲಿ ಒಬ್ಬ ಸಾತ್ವಿಕನಾದ ವ್ಯಕ್ತಿ ಇರುವನಾದರೆ, ಆತನ ಒಳಿತಿನ ಕಾರಣದಿಂದ ಆತನ ಸಲುವಾಗಿ ಆ ಗ್ರಾಮವನ್ನು ಅಲ್ಲಾಹನು ನಾಶದಿಂದ ಸಂರಕ್ಷಿಸುತ್ತಾನೆ. ಆದರೆ ನಾಶ ಬರುವುದಾದರೆ, ಎಲ್ಲರ ಮೇಲೆ ಬರುತ್ತದೆ. ಹೀಗಿದ್ದರೂ ಅವನು ತನ್ನ ದಾಸರನ್ನು ಯಾವುದಾದರೂ ರೀತಿಯಲ್ಲಿ ಸಂರಕ್ಷಿಸುತ್ತಾನೆ. ಒಬ್ಬ ಸಾತ್ವಿಕನಿದ್ದರೂ ಇತರರನ್ನು ಕೂಡ ರಕ್ಷಿಸಲಾಗುತ್ತದೆ ಎಂಬುದಾಗಿದೆ ಅಲ್ಲಾಹನ ರೀತಿ.

(ಮಲ್‌ಫೂಝಾತ್, ಸಂಪುಟ–3, ಪುಟ–262, 1984 ಆವೃತ್ತಿ)

ಆದ್ದರಿಂದ ಈ ಮೂಲಭೂತ ತತ್ವವನ್ನು ಸದಾ ನೆನಪಿನಲ್ಲಿಡಬೇಕು. ಅಲ್ಲಾಹನು ತನ್ನ ನಿಷ್ಠಾವಂತ ದಾಸರ ದುಆಗಳನ್ನು ಆಲಿಸುತ್ತಾನೆ ಮತ್ತು ಅವರ ಸತ್ಕರ್ಮಗಳನ್ನು ಸ್ವೀಕಾರ ಮಾಡುತ್ತಾನೆ. ಆದ್ದರಿಂದ ನಮ್ಮ ಆರಾಧನೆಗಳು ಅಲ್ಲಾಹನಿಗಾಗಿ ಮಾತ್ರವಾಗಿರುವಂತೆ ಆಗಲು ನಾವು ಪ್ರಯತ್ನಿಸಬೇಕು.

ನಮ್ಮ ಕೃತ್ಯಗಳು ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ಆಗಿರಬೇಕು. ಬಹಳ ಭಯಾನಕ ನಾಶದ ಮೋಡಗಳು ನಮ್ಮ ಮೇಲೆ ಇವೆ ಎಂದು ಇಂದಿನ ಲೋಕದ ಸ್ಥಿತಿಗಳಿಂದ ಸ್ಪಷ್ಟವಾಗುತ್ತಿದೆ. ರಶ್ಯದ ಅಧ್ಯಕ್ಷ ಆಟಂ ಬೋಂಬ್ ಉಪಯೋಗಿಸಿದರೆ ಅದರ ಎದುರಾಗಿ ಪ್ರತಿಧಾಳಿ ನಡೆಸಲಾಗುವುದು ಎಂದು ಅಮೇರಿಕದ ಅಧ್ಯಕ್ಷ ಹೇಳಿರುವರು. ಅದರ ನಂತರ ಉಂಟಾಗುವ ನಾಶದಿಂದ ಲೋಕವೇ ಕೊನೆಗೊಳ್ಳುವುದು. ನಾವಿಲ್ಲಿ ಸುರಕ್ಷಿತರೆಂದು ಈ ದೇಶದಲ್ಲಿರುವರು ಭಾವಿಸದಿರಲಿ. ಯಾವನೂ ಎಲ್ಲೂ ಸುರಕ್ಷಿತನಲ್ಲ. ಈ ದೊಡ್ಡ ಶಕ್ತಿಗಳ ನೇತಾರರ ಬುದ್ಧಿ ಕೆಟ್ಟುಹೋಗುವಾಗ ಅವರು ಏನೂ ನೋಡುವುದಿಲ್ಲ. ಆದ್ದರಿಂದ ದುಆಗಳನ್ನು ಮಾಡುವುದು ಮತ್ತು ತಮ್ಮ ಆರಾಧನೆಗಳನ್ನು ಅಲ್ಲಾಹನಿಗಾಗಿ ಮಾತ್ರ ಮಾಡುವುದು ಇಂತಹ ಸ್ಥಿತಿಯಲ್ಲಿ ಅಹ್ಮದಿಯರದ್ದೇ ಕೆಲಸವಾಗಿದೆ.

ಸಜ್ಜನರ ಸಲುವಾಗಿ ತನ್ನ ವರಿಷ್ಠ ದಾಸರಿಗಾಗಿ ಅಲ್ಲಾಹನು ಇತರರನ್ನು ಕೂಡ ರಕ್ಷಿಸುತ್ತಾನೆ ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿರುವರು ಮತ್ತು ಪವಿತ್ರ ಖುರ್ಆನಿನಿಂದ ಇದೇ ಸಂಗತಿ ತಿಳಿದುಬರುತ್ತದೆ. ಇಲ್ಲಿಗೆ ಬಂದು ನಾವು ಸುರಕ್ಷಿತರಾಗಿದ್ದೇವೆ ಮತ್ತು ನಮ್ಮ ಮಕ್ಕಳ ಭವಿಷ್ಯ ಸುರಕ್ಷಿತಗೊಂಡಿದೆ ಎಂದು ಯಾರೂ ಭಾವಿಸಬಾರದು. ಖಂಡಿತವಲ್ಲ. ಬಹಳ ಅಪಾಯಕಾರಿ ಕಾಲಘಟ್ಟದಿಂದ ನಾವು ಸಾಗುತ್ತಿದ್ದೇವೆ. ಇಂತಹ ಸ್ಥಿತಿಯಲ್ಲಿ ಕೇವಲ ಅಲ್ಲಾಹನಿಗೆ ನಮ್ಮನ್ನು ರಕ್ಷಿಸಲು ಸಾಧ್ಯ. ಆದ್ದರಿಂದ ಸ್ವತಃ ಅಲ್ಲಾಹನ ಮುಂದೆ ಬಾಗಿರಿ ಮತ್ತು ತಮ್ಮ ಮಕ್ಕಳನ್ನು ಕೂಡ ಅವನ ಮುಂದೆ ಬಾಗುವವರನ್ನಾಗಿ ಮಾಡಿರಿ. ಹಾಗಾದರೆ ಮಾತ್ರ ನಮ್ಮನ್ನು ಮತ್ತು ನಮ್ಮ ಮಕ್ಕಳನ್ನು ಕೂಡ ಸುರಕ್ಷಿತಗೊಳಿಸಬಹುದಾಗಿದೆ.

ಈ ಲೋಕವು ನಮ್ಮನ್ನು ರಕ್ಷಿಸಲಾರದು. ನಮ್ಮ ಮತ್ತು ನಮ್ಮ ಮಕ್ಕಳ ಭವಿಷ್ಯವನ್ನು ಸುರಕ್ಷಿತಗೊಳಿಸಲಾರದು. ಬದಲಾಗಿ ನಾವು **ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ರಸೂಲುಲ್ಲಾಹ್** ಎಂಬ ಕಲಿಮ ವಚನದ ಹಕ್ಕನ್ನು ಈಡೇರಿಸುವವರಾದರೆ, ಅಲ್ಲಾಹನು ನಮ್ಮ ವಿನಮ್ರತೆಯ ಪ್ರಾರ್ಥನೆಗಳ ಮತ್ತು ಉತ್ತಮ ಕೃತ್ಯಗಳ ಕಾರಣದಿಂದ ರಕ್ಷಿಸುವನು.

ಆದ್ದರಿಂದ ಇಂದಿನ ಸ್ಥಿತಿಗಳಲ್ಲಿ, ಲೋಕದ ಸ್ಥಿತಿ ಇನ್ನಷ್ಟು ಕೆಟ್ಟು ಹೋಗುವುದಕ್ಕೆ ಮುಂಚಿತವಾಗಿ ಬಹಳ ದುಆಗಳನ್ನು ಮಾಡಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಆರಂಭದಲ್ಲಿ ಮಾಡುವುದೇ ಸತ್ಕರ್ಮವಾಗಿದೆ. ಅನಂತರ ಮಾಡಿದರೆ ಏನೂ ಪ್ರಯೋಜನವಿಲ್ಲ. ಕೇವಲ ತಾತ್ಕಾಲಿಕ ಮತ್ತು ದೈಹಿಕ ಆವೇಶದಿಂದ ಮಾಡುವ ಸತ್ಕರ್ಮಗಳನ್ನು ಅಲ್ಲಾಹನು ಸ್ವೀಕಾರ ಮಾಡಲಾರನು. ಹಡಗು ಮುಳುಗುವಾಗ ಎಲ್ಲರೂ ಅಳುತ್ತಾರೆ. ಆಗ ಅಳುವುದು ಮತ್ತು ಕಿರುಚುವುದು ಸಹಜವಾದ ಸಂಗತಿಯಾಗಿರುವುದರಿಂದ ಅದರಿಂದ ಪ್ರಯೋಜನವಿಲ್ಲ. ನೆಮ್ಮದಿಯ ಸಮಯದಲ್ಲಿ, ಆರಂಭದಲ್ಲೇ ದೇವನ ಮುಂದೆ ಅಳುವುದರಿಂದ ಪ್ರಯೋಜನವಿದೆ. ಸಮಯಕ್ಕೆ ಮುಂಚಿತವಾಗಿಯೇ ಎಚ್ಚರದಿಂದ ಇರುವುದು ಮತ್ತು ಮುಂಜಾಗ್ರತೆ ವಹಿಸುವುದು ಅಲ್ಲಾಹನನ್ನು ಗಳಿಸಲಿಕ್ಕಿರುವ ಸೂತ್ರವಾಗಿದೆ. ಮಿಂಚು ಬೀಳಲಿದೆ ಎಂಬ ರೀತಿಯಲ್ಲಿ ಎಚ್ಚರದಿಂದ ಇರುವವರ ಮೇಲೆ ಖಂಡಿತ ಮಿಂಚು ಬೀಳದು. ಎಷ್ಟು ಗುಡುಗು ಇದ್ದರೂ ಕೂಡ. ಆದರೆ ಯಾವನು ಮಿಂಚನ್ನು ನೋಡಿ ಕಿರುಚುತ್ತಾನೋ ಆತನ ಮೇಲೆ ಖಂಡಿತ ಬೀಳುವುದು ಮತ್ತು ಆತನನ್ನು ನಾಶಮಾಡುವುದು. ಏಕೆಂದರೆ ಆತನು ಮಿಂಚನ್ನು ಹೆದರುತ್ತಾನೆ. ದೇವನನ್ನು ಹೆದರುವುದಿಲ್ಲ."

(ಮಲ್ಫೂಝಾತ್, ಸಂಪುಟ–3, ಪುಟ–265, 1984 ಆವೃತ್ತಿ)

ಅಲ್ಲಾಹನೊಂದಿಗೆ ಸಂಬಂಧವಿರಿಸಬೇಕೆಂದಾದರೆ ಈಗ ಇರಿಸಿರಿ ಎಂದು ಹಝ್ರತ್ ಮಸೀಹ್ ಮೌಊದ್(ಅ) ಬಹಳ ಸ್ಪಷ್ಟವಾದ ರೀತಿಯಲ್ಲಿ ನಮ್ಮನ್ನು ಎಚ್ಚರಿಸಿದ್ದಾರೆ. ಈಗಂತು ಅಪಾಯದ ಮೋಡಗಳು ಸ್ವಲ್ಪ ಸರಿದಿವೆ. ಕನಿಷ್ಠ ಪಕ್ಷ ಬೇಕಾದರೆ ನಿಯಂತ್ರಣಕ್ಕೆ ತರಬಹುದಾದ ಸ್ಥಿತಿಯಾಗಿದೆ. ಆದರೆ ಯಾವಾಗ ಬೇಕಾದರೂ ಇದು ಹರಡಬಹುದಾಗಿದೆ.

ಆದ್ದರಿಂದ ಇಂದು ಅಹ್ಮದಿಯರ ವಿಶ್ವಾಸ, ಅಲ್ಲಾಹನೊಂದಿಗೆ ಅವರಿಗೆ ಇರುವ ಸಂಬಂಧ ಮತ್ತು ಪ್ರಾರ್ಥನೆಗಳು ಲೋಕವನ್ನು ನಾಶದಿಂದ ರಕ್ಷಿಸಬಹುದಾಗಿದೆ. ಲೋಕದೊಂದಿಗೆ ಸಹಾನುಭೂತಿ ಇರಿಸಿಕೊಂಡು ದುಆ ಮಾಡಿರಿ. ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳು ಮತ್ತು ಅಲ್ಲಾಹನ ದಾಸರಿಗೆ ಸಲ್ಲಬೇಕಾದ ಹಕ್ಕುಗಳ ಕಡೆಗೆ ಗಮನಹರಿಸದಿದ್ದರೆ ಈ ಸುಂದರ ಲೋಕವು ಮರುಭೂಮಿಯಂತಾಗುವುದು ಎಂದು ನಿಮ್ಮ ನಿಮ್ಮ ವಲಯ ಮತ್ತು ನಿಮ್ಮ ಸುತ್ತಮುತ್ತ ಇರುವ ಜನರಿಗೆ ತಿಳಿಸಿರಿ. ಆದ್ದರಿಂದ ಪ್ರತಿಯೊಬ್ಬ ಅಹ್ಮದಿಯು ಈ ಚಿಂತೆಯೊಂದಿಗೆ ತನ್ನ ಕಡ್ಡಾಯ ಕರ್ತವ್ಯಗಳನ್ನು ಈಡೇರಿಸಲು ಪ್ರಯತ್ನಿಸಬೇಕು.

ಪ್ರಾರ್ಥನೆಗಳ ಕಡೆಗೆ ಹೆಚ್ಚಿನ ಗಮನಹರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ನೋಡಿರಿ, ನೀವು ಪರಿಶ್ರಮಪಟ್ಟು ಕೃಷಿಭೂಮಿಯನ್ನು ತಯಾರು ಮಾಡಿದರೆ ಪ್ರಯೋಜನದ ಪ್ರತೀಕ್ಷೆ ಇರುತ್ತದೆ. ಇಂತಹ ನೆಮ್ಮದಿಯ ದಿನಗಳು ಪರಿಶ್ರಮಕ್ಕಾಗಿ ಆಗಿವೆ. ಈಗ ದೇವನನ್ನು ನೆನಪಿಡುವುದಾದರೆ, ಅದರ ರುಚಿಯನ್ನು ಸವಿಸುವಿರಿ. ಲೋಕದ ಕೆಲಸಗಳ ಮುಂದೆ ನಮಾಝ್‌ಗಳಿಗೆ ಹಾಜರಾಗುವುದು ಕಷ್ಟದ ಕೆಲಸವಾಗಿ ಅನುಭವವಾಗುತ್ತದೆ. ತಹಜ್ಜುದ್ ಅಂತು ಇನ್ನೂ ಕಷ್ಟದ ಸಂಗತಿ. ಆದರೆ ಈಗ ಅದರ ಅಭ್ಯಾಸವನ್ನು ಮಾಡಿಕೊಂಡರೆ ನಂತರ ಕಷ್ಟವಿರದು. ಈಗ ದುಆಗಳನ್ನು ಮಾಡಿದರೆ ಕರುಣಾಳು ಮತ್ತು ದಯಾಳು ಆದ ಅಲ್ಲಾಹನು ಔದಾರ್ಯ ತೋರಿಸುವನು. ನೋಡಿರಿ, ಈಗ ನೀವು ಲೌಕಿಕವಾದ ಕೆಲಸಗಳನ್ನು ಕೂಡ ಮಾಡುತ್ತೀರಿ. ತನ್ನ ಮೇಲೆ ಮತ್ತು ತನ್ನ ಕುಟುಂಬದ ಮೇಲೆ ಕೃಪೆ ತೋರಿಸುತ್ತೀರಿ. ಅವರ ಆವಶ್ಯಕತೆಗಳ ಬಗ್ಗೆ ಚಿಂತಿಸುತ್ತೀರಿ. ಮಕ್ಕಳ ಮೇಲೆ ನಿಮಗೆ ಕರುಣೆ ಉಕ್ಕಿಬರುತ್ತದೆ. ಅದೇ ರೀತಿಯಲ್ಲಿ ನಮಾಝ್‌ಗಳಲ್ಲಿ ಅವರಿಗಾಗಿ ದುಆಗಳನ್ನು ಮಾಡಿರಿ. ಈ ವಿಪತ್ತನ್ನು ಹೋಗಲಾಡಿಸಲು ಮತ್ತು ಈ ಶಿಕ್ಷೆಯಿಂದ ಸುರಕ್ಷಿತಗೊಳಿಸಲು ರುಕೂನಲ್ಲೂ ಸಜ್‌ದದಲ್ಲೂ ದುಆ ಮಾಡಿರಿ.

ದುಆ ಮಾಡುವವನು ವಂಚಿತನಾಗಲಾರನು.

ದುಆಗಳನ್ನು ಮಾಡುವವನು ಅಸಡ್ಡೆ ಹೊಂದಿದ ಕೊಳಕು ಮನುಷ್ಯನ ಹಾಗೆ ಕೊಲ್ಲಲ್ಪಡಲಾರನು. ಹೀಗೆ ಮಾಡದಿದ್ದರೆ ಅಲ್ಲಾಹನನ್ನು ಗುರುತಿಸಲು ಸಾಧ್ಯವೇ ಅಲ್ಲ. ಅವನು ತನ್ನ ಸತ್ಯದಾಸರ ಮತ್ತು ಅನ್ಯರ ನಡುವೆ ಒಂದು ವ್ಯತ್ಯಾಸವನ್ನು ಉಂಟುಮಾಡುತ್ತಾನೆ. ಒಬ್ಬನು ಹಿಡಿಗೂಡಲ್ಪಡುವನು ಮತ್ತೊಬ್ಬನು ರಕ್ಷಿಸಲ್ಪಡುವನು. ಆದ್ದರಿಂದ ಪರಿಪೂರ್ಣವಾಗಿ ನಿಮ್ಮಲ್ಲಿ ಸತ್ಯವಾದ ನಿಷ್ಠೆ ಉಂಟಾಗುವಂತೆ ಮಾಡಿರಿ.

(ಮಲ್ಫೂಝಾತ್, ಸಂಪುಟ–3, ಪುಟ–266, 1984 ಆವೃತ್ತಿ)

ಇದು ಹಝ್ರತ್ ಮಸೀಹ್ ಮೌಊದ್(ಅ) ಪ್ಲೇಗಿನ ವಿಪತ್ತು ಹರಡಿದ ಕಾಲದಲ್ಲಿ ಹೇಳಿದ್ದರು. ಆದರೆ ನಾನು ಹೇಳಿದಂತೆ ಈಗ ಕಾಣುತ್ತಿರುವ ಜಾಗತಿಕ ನಾಶದ ಲಕ್ಷಣಗಳ ಕಾರಣದಿಂದ ನಾವು ಅಲ್ಲಾಹನ ಮುಂದೆ ವಿಶೇಷವಾಗಿ ಬಾಗಬೇಕಾದ ಆವಶ್ಯಕತೆಯಿದೆ. ನಮ್ಮನ್ನು ಸ್ವತಃ ರಕ್ಷಿಸಲು ಮತ್ತು ಲೋಕವನ್ನು ರಕ್ಷಿಸಲು ಇರುವ ಮಾರ್ಗ ಇದೊಂದೇ ಆಗಿದೆ.

ಉನ್ನತ ಸ್ವಭಾವಗುಣಗಳನ್ನು ತೋರಿಸಲು ಕೂಡ ಹಝ್ರತ್ ಮಸೀಹ್ ಮೌಊದ್(ಅ) ಉಪದೇಶಿಸಿದ್ದರು. ಏಕೆಂದರೆ ಉನ್ನತ ನೈತಿಕಗುಣಗಳನ್ನು ತೋರಿಸಬೇಕು ಎಂಬುದು ಕೂಡ ಅಲ್ಲಾಹನ ಆದೇಶಗಳಲ್ಲಿ ಒಂದು ಆದೇಶವಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

"ಸ್ವಭಾವಗಳನ್ನು ಸರಿಪಡಿಸುವುದು ತುಂಬಾ ಕಷ್ಟದ ಕೆಲಸವಾಗಿದೆ. ಎಲ್ಲಿಯ ವರೆಗೆ ಮನುಷ್ಯನು ತನ್ನ ಅವಲೋಕನ ನಡೆಸುವುದಿಲ್ಲವೋ ಸುಧಾರಣೆ ಸಾಧ್ಯವಲ್ಲ. ನೀವು ದಿನನಿತ್ಯ ಹೇಳುವ ಮಾತುಗಳನ್ನು, ನೀವು ದಿನನಿತ್ಯ ಸಾಗಿಸುವ ಜೀವಿತವನ್ನು ಅವಲೋಕಿಸಬೇಕು. ಏನೆಲ್ಲ ಒಳಿತುಗಳನ್ನು ಮಾಡಿದ್ದೇವೆ, ಏನೆಲ್ಲ ಕೆಡುಕುಗಳನ್ನು ಮಾಡಿದ್ದೇವೆ ಎಂದು ನೋಡುವ ತನಕ ಸುಧಾರಣೆ ಸಾಧ್ಯವಲ್ಲ. ನಾಲಗೆಯಿಂದ ಹೊರಡುವ ಕೊಳಕು ಮಾತುಗಳಿಂದ ಶತ್ರುತ್ವ ಉಂಟಾಗುತ್ತದೆ. ಆದ್ದರಿಂದ ತಮ್ಮ ನಾಲಗೆಯನ್ನು ಸದಾ ನಿಯಂತ್ರಣದಲ್ಲಿರಿಸಬೇಕು.

ಬುದ್ಧಿವಂತಿಕೆ ಏನೆಂದರೆ, ಮನುಷ್ಯನ ಒಳಗೆ ಅಲ್ಲಾಹನು ಇರಿಸಿರುವ ಶಕ್ತಿಗಳು ಮತ್ತು ಸಾಮರ್ಥ್ಯಗಳನ್ನು ಎಂತಹ ರೀತಿಯಲ್ಲಿ ತರಬೇತಿ ಮಾಡಬೇಕು ಮತ್ತು ಎಂತಹ ರೀತಿಯಲ್ಲಿ ಉಪಯೋಗಿಸಬೇಕು ಎಂದರೆ, ಮನುಷ್ಯನ ಪ್ರತಿಯೊಂದು ಕೃತ್ಯದಿಂದ ಉನ್ನತ ಸ್ವಭಾವಗುಣ ಪ್ರಕಟಗೊಳ್ಳಬೇಕು. ಚಿಕ್ಕ ಚಿಕ್ಕ ಸಂಗತಿಗಳಿಗಾಗಿ ಕೆಟ್ಟ ಸ್ವಭಾವವನ್ನು ತೋರಿಸುವುದಾದರೆ, ತನ್ನ ಜೀವವನ್ನು ಸ್ವತಃ ಕಷ್ಟತೆಗೆ ಸಿಲುಕಿಸುತ್ತೀರಿ.

ನೆನಪಿಡಬೇಕಾದ ಮತ್ತೊಂದು ಸಂಗತಿಯೇನೆಂದರೆ, ವೈಯಕ್ತಿಕ ವಿಷಯಗಳಲ್ಲಿ ಸಹನೆ, ತಾಳ್ಮೆ, ಆತ್ಮ ನಿಯಂತ್ರಣ ಮತ್ತು ಉನ್ನತ ಮಟ್ಟದ ನೈತಿಕಗುಣಗಳನ್ನು ಪ್ರಕಟಿಸುವುದು ಮತ್ತು ಜಗಳಗಳಿಂದ ದೂರವಿರಲು ಇಸ್ಲಾಂ ಒಂದೆಡೆ ಉಪದೇಶಿಸುತ್ತದೆ. ಮತ್ತೊಂದೆಡೆ ಕಾನೂನಿನ ಮಿತಿಯಲ್ಲಿದ್ದುಕೊಂಡು ಧಾರ್ಮಿಕ ಅಭಿಮಾನವನ್ನು ತೋರಿಸಲು ಕೂಡ ಹೇಳುತ್ತದೆ. ಈ ಧಾರ್ಮಿಕ ಅಭಿಮಾನದ ಪ್ರಕಟಣೆಯ ಕಡೆಗೆ ಗಮನವನ್ನು ಸೆಳೆಯುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಒಬ್ಬ ವ್ಯಕ್ತಿ ಇಸ್ಲಾಂ ಧರ್ಮದಿಂದ ಸ್ಪಷ್ಟವಾದ ರೀತಿಯಲ್ಲಿ ಹೊರಗೆ ಹೋಗಿಕೊಂಡ ಕೊಳಕು ಭಾಷೆಯನ್ನು ಉಪಯೋಗಿಸಿ ಬೈಯ್ಯುವವನ ಮತ್ತು ಕಠಿಣವಾದ ಶತ್ರುತ್ವ ತೋರಿಸುವವನ ವಿಷಯವೇ ಬೇರೆ. ಸಹಾಬಿಯರಿಗೂ ಇಂತಹ ಕಷ್ಟತೆಗಳ ಅನುಭವವಾಗಿತ್ತು. ಇಸ್ಲಾಮಿನ ಬಗ್ಗೆ ನಿಂದನೀಯ ಮಾತುಗಳನ್ನು ಅವರು ತಮ್ಮ ಕೆಲವು ಸಂಬಂಧಿಕರ ಬಾಯಿಯಿಂದಲೇ ಆಲಿಸಿದ್ದರು.

ಅವರೊಂದಿಗೆ ಆಳವಾದ ಸಂಬಂಧಗಳಿದ್ದರೂ ನಿಕಟ ಸಂಬಂಧಿಗಳಾಗಿದ್ದರೂ ಅವರಿಗಿಂತ ಸಹಾಬಿಯರು ಇಸ್ಲಾಮಿಗೆ ಪ್ರಾಮುಖ್ಯವನ್ನು ನೀಡಿದರು."

ಮುಂದೆ ಹೇಳಿದರು: "...........ಒಬ್ಬ ವ್ಯಕ್ತಿ ಇಸ್ಲಾಮಿನ ಕಠಿಣ ಶತ್ರುವಾಗಿದ್ದು ಆತನು ಹಝ್ರತ್ ಪೈಗಂಬರ್(ಸ)ರನ್ನು ಬೈಯ್ಯುವವನಾದರೆ, ಆತನೊಂದಿಗೆ ಉಪೇಕ್ಷೆ ಮತ್ತು ಅನಿಷ್ಟತೆಯನ್ನು ತೋರಿಸಬೇಕಾಗುವುದು. ಆದರೆ ಒಬ್ಬ ವ್ಯಕ್ತಿ ಇಂತಹ ಕೃತ್ಯಗಳನ್ನು ಮಾಡುವುದಿಲ್ಲವೆಂದಾದರೆ, ಆತನೊಂದಿಗೆ ಸಂಬಂಧ ಇರಿಸಿಕೊಳ್ಳುವುದರಲ್ಲಿ ತಪ್ಪಿಲ್ಲ.

(ಮಲ್‌ಫೂಝಾತ್, ಸಂಪುಟ–3, ಪುಟ–346)

ವಿರೋಧ ಮಾಡುವುದಿಲ್ಲವೆಂದಾದರೆ ಸಂಬಂಧವಿರಿಸಿಕೊಳ್ಳಬೇಕು. ಉತ್ತಮ ಸಂಬಂಧವನ್ನು ಇರಿಸಿಕೊಳ್ಳಬೇಕು. ಆದರೆ ಯಾವನಾದರೂ ಸ್ಪಷ್ಟವಾಗಿ ವಿರೋಧ ತೋರಿಸುತ್ತಾನೆ ಎಂದಾದರೆ, ಇಸ್ಲಾಂ ಮತ್ತು ಹಝ್ರತ್ ಪೈಗಂಬರ್(ಸ)ರನ್ನು ಕೆಟ್ಟ ಭಾಷೆಯಲ್ಲಿ ಬೈಯ್ಯುತ್ತಾನೆ ಎಂದಾದರೆ, ಮನವರಿಕೆ ಮಾಡಿಸಿದರೂ ಅದರಿಂದ ದೂರ ಸರಿಯುವುದಿಲ್ಲವೆಂದಾದರೆ, ಅಲ್ಲಿ ಧಾರ್ಮಿಕ ಅಭಿಮಾನವನ್ನು ತೋರಿಸಬೇಕು.

ಅದೇ ರೀತಿಯಲ್ಲಿ ಮನವರಿಕೆ ಮಾಡಿಕೊಟ್ಟರೂ ಹಝ್ರತ್ ಮಸೀಹ್ ಮೌಊದ್(ಅ)ರ ವಿರೋಧದಲ್ಲಿ ಮೃಗೀಯ ಸ್ವಭಾವದಿಂದ ದೂರ ಸರಿಯುವುದಿಲ್ಲವೆಂದಾದರೆ ಅವರೊಂದಿಗೂ ನಾವು ಸ್ನೇಹಸಂಬಂಧವಿರಿಸಲು ಸಾಧ್ಯವಲ್ಲ. ಯಾವನೇ ಅಹ್ಮದಿಯ ಅಭಿಮಾನಕ್ಕೆ ಅದನ್ನು ಸಹಿಸಲು ಸಾಧ್ಯವಲ್ಲ.

ನಿಮ್ಮಲ್ಲಿ ಅನೇಕರು ಇಲ್ಲಿಗೆ ಪಾಕಿಸ್ತಾನದಿಂದ ಬಂದಿರುವಿರಿ. ಹಝ್ರತ್ ಮಸೀಹ್ ಮೌಊದ್(ಅ)ರ ವಿರುದ್ಧ ಅಲ್ಲಿಯ ನಾಮಧಾರಿಗಳಾದ ಮುಲ್ಲಾಗಳು ಕೆಟ್ಟ ಭಾಷೆಯನ್ನು ಉಪಯೋಗಿಸುತ್ತಾರೆ ಎಂದು ನಿಮಗೆ ಸ್ವಂತ ಅನುಭವವಿದೆ. ಅವರೊಂದಿಗೆ ಸ್ನೇಹವನ್ನು ತೋರಿಸಬೇಕೆಂದು ಮತ್ತು ಅವರ ಕೆಡುಕುಗಳು ಅವರ ವಿರುದ್ಧವೇ ತಿರುಗೇಟಾಗಲು ದುಆ ಮಾಡಬಾರದೆಂದೂ ನಮ್ಮೊಡನೆ ಹೇಳಲಾದರೆ, ನಮ್ಮ ಧಾರ್ಮಿಕ ಅಭಿಮಾನ ಅದನ್ನು ಸಹಿಸಲಾರದು. ಆದರೆ ನಾವು ಇಂತಹ ಜನರ ವಿರುದ್ಧ ಕಾನೂನನ್ನು ಸ್ವಂತ ಕೈಯಲ್ಲಿ ಉಪಯೋಗಿಸುವ ಕೆಲಸವನ್ನು ಮಾಡಲಾರೆವು. ಏಕೆಂದರೆ, ಇದು ಕೂಡ ಇಸ್ಲಾಮಿನ ಪಾಠದ ಭಾಗವಾಗಿದೆ. ಯಾವುದೇ ಅವಸ್ಥೆಯಲ್ಲೂ ಕಾನೂನನ್ನು ಸ್ವಂತ ಕೈಗಳಿಂದ ಉಪಯೋಗಿಸಬಾರದು.

ಬೈಅತ್ ಮಾಡಿದ ನಂತರ ಅಹ್ಮದಿಯರಲ್ಲಿ ಪರಸ್ಪರ ಪ್ರೀತಿ ಮತ್ತು ಸಹೋದರತೆಯ ಸಂಬಂಧವಿರಬೇಕೆಂದು ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಪರಸ್ಪರ ನೈಜವಾದ ಸಹಾನುಭೂತಿ ಇರದಿದ್ದರೆ, ನಮ್ಮ ಜಮಾಅತಿಗೆ ಲವಲವಿಕೆ ಮತ್ತು ತಾಜಾತನ ಬರದು. ಪೂರ್ಣ ಶಕ್ತಿಯುಳ್ಳವರು ದುರ್ಬಲರನ್ನು ಪ್ರೀತಿಸಲಿ. ಎಂದರೆ, ನಿಮಗೆ ನೀಡಲಾದ ಎಲ್ಲ ಸಾಮರ್ಥ್ಯಗಳನ್ನು ಮತ್ತು ಶಕ್ತಿಗಳನ್ನು ಉಪಯೋಗಕ್ಕೆ ತಂದು ದುರ್ಬಲರನ್ನು ಪ್ರೀತಿಸಬೇಕು. ಅವರೊಡನೆ ಕೋಪಗೊಳ್ಳಬಾರದು, ಬೇಸರ ತೋರಿಸಬಾರದು. ಯಾವನದಾದರೂ ತಪ್ಪನ್ನು ಕಂಡು ಆತನೊಂದಿಗೆ ಉತ್ತಮವಾಗಿ ವರ್ತಿಸದೇ ಆತನೊಂದಿಗೆ ಕೋಪ ಮತ್ತು ಅನಿಷ್ಟತೆಯಿಂದ ವರ್ತಿಸುವುದಾದರೆ, ಅದು ಸರಿಯಲ್ಲ. ಪರಸ್ಪರ ತಪ್ಪುಗಳನ್ನು ಕ್ಷಮಿಸುವಾಗಲೇ ಜಮಾಅತ್ ಆಗುತ್ತದೆ. ಸ್ವಂತ ಸಹೋದರರಂತೆ ಪರಸ್ಪರ ವರ್ತಿಸಿರಿ. ಜಮಾಅತಿನೊಳಗೆ ಆಂತರಿಕ ಬಿರುಕು ಉಂಟಾಗುವುದು ಸರಿಯಲ್ಲ. ಸಹಾಬಿಯರು ಕೂಡ ಪ್ರೀತಿ ಮತ್ತು ಸಹೋದರತೆಯೊಂದಿಗೆ ಪರಸ್ಪರ ಇದ್ದರು. ಒಂದು ಜಮಾಅತಾಗಿ ಇದ್ದರು. ತನ್ನ ಜಮಾಅತ್ತಿನ ಸದಸ್ಯರಲ್ಲೂ ಸಹಾಬಿಯರ ಹಾಗೆ ಸಹೋದರತೆಯ ಸಂಬಂಧವಿರಬೇಕೆಂದು ಹಝ್ರತ್ ಮಸೀಹ್ ಮೌಊದ್(ಅ) ಬಯಸುತ್ತಾರೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸಹಾಬಿಯರ ಜಮಾಅತಿನಂತೆಯೇ ಅಲ್ಲಾಹನು ಈ ಜಮಾಅತನ್ನು ಸ್ಥಾಪಿಸಿರುವನು. ಅದೇ ರೀತಿಯಲ್ಲಿ ಸಹೋದರ ಸಂಬಂಧವನ್ನು ಅಲ್ಲಾಹನು ಇಲ್ಲೂ ಸ್ಥಾಪಿಸುವನು. ಅಲ್ಲಾಹನಲ್ಲಿ ನನಗೆ ಬಹಳ ಪ್ರತೀಕ್ಷೆಯಿದೆ. ನೋಡಿರಿ, ಪರಸ್ಪರ ದೂರುವುದು, ಮನಸ್ಸಿಗೆ ನೋವುಂಟು ಮಾಡುವುದು, ಕಠೋರ ಪದಗಳನ್ನು ಉಪಯೋಗಿಸುವುದು, ದುಃಖ ನೀಡುವುದು, ದುರ್ಬಲರನ್ನು ಮತ್ತು ದೀನರನ್ನು ನೀಚರೆಂದು ಭಾವಿಸುವುದು ಕಠಿಣವಾದ ಪಾಪವಾಗಿದೆ. (ಮಲ್‌ಫೂಝಾತ್, ಸಂಪುಟ–3, ಪುಟ–348–349, 1984 ಆವೃತ್ತಿ)

ಇದಾಗಿದೆ ಉನ್ನತ ನೈತಿಕಗುಣಗಳು. ಅನ್ಯೋನ್ಯ ಭಾವನೆಗಳಿಗೆ ಬೆಲೆನೀಡಬೇಕು. ಇದು ಆಗುವಾಗಲೇ ನಾವು ಹಝ್ರತ್ ಮಸೀಹ್ ಮೌಊದ್(ಅ)ರ ಪ್ರತೀಕ್ಷೆಗಳನ್ನು ಈಡೇರಿಸುವವರಾಗುವೆವು. ಆಗಲೇ ಹಝ್ರತ್ ಮಸೀಹ್ ಮೌಊದ್(ಅ)ರ ಜಮಾಅತಿಗೆ ಅಲ್ಲಾಹನು ನೀಡಿದ ವಾಗ್ದಾನಗಳಿಗೆ ನಾವು ವಾರಸುದಾರರಾಗುವೆವು. ಆಗಲೇ ನಾವು ಅಲ್ಲಾಹನ ಅನುಗ್ರಹಗಳನ್ನು ಗಳಿಸುವವರಾಗುವೆವು.

ಹಝ್ರತ್ ಮಸೀಹ್ ಮೌಊದ್(ಅ)ರ ಕಾಲದಲ್ಲಿ ಭಾರತದ ಅನೇಕ ಸಮುದಾಯಗಳ ಮತ್ತು ಗೋತ್ರಗಳ ಜನರು ಜಮಾಅತಿಗೆ ಬಂದು ಸೇರಿದ್ದರು. ಈಗ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಮಾಡಿದ ವಾಗ್ದಾನಗಳ ಪ್ರಕಾರ ಲೋಕದ ಅನೇಕ ಗೋತ್ರಗಳನ್ನು ಮತ್ತು ಸಮುದಾಯದವರನ್ನು ಜಮಾಅತಿಗೆ ಸೇರಿಸಿದ್ದಾನೆ. ಹಝ್ರತ್ ಪೈಗಂಬರ್(ಸ)ರ ಜಮಾಅತಿನಲ್ಲಿ ಸೇರುವಂತಾಗಲು ಮತ್ತು ಅವರ ಸತ್ಯಸಂಧ ದಾಸರಾದ ಹಝ್ರತ್ ಮಸೀಹ್ ಮೌಊದ್(ಅ)ರ ಜಮಾಅತಿನಲ್ಲಿ ಸೇರುವಂತಾಗಲು ವಿವಿಧ ಗೋತ್ರದವರಿಗೆ ಮತ್ತು ಸಮುದಾಯದವರಿಗೆ ಸೌಭಾಗ್ಯ ನೀಡಿದ್ದು ಮತ್ತು ಒಂದು ಸಮುದಾಯವನ್ನಾಗಿ ಮಾಡಿದ್ದು ಅಲ್ಲಾಹನ ಔದಾರ್ಯವಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನೀವು ಪರಸ್ಪರ ಸಹೋದರರಾಗಿರುವಿರಿ. ನಿಮ್ಮ ತಂದೆಗಳು ಬೇರೆ ಬೇರೆಯಾಗಿದ್ದರೂ ನಿಮ್ಮ ಆಧ್ಯಾತ್ಮಿಕ ತಂದೆ ಒಬ್ಬರೇ ಆಗಿರುವರು.

(ಮಲ್‌ಫೂಝಾತ್, ಸಂಪುಟ–3, ಪುಟ–349, 1984 ಆವೃತ್ತಿ)

ಒಂದೇ ಮರದ ರೆಂಬೆಗಳಾಗಿರುವಿರಿ. ಕಪ್ಪುವರ್ಣದವರಾದರೂ, ಬಿಳಿವರ್ಣದವರಾದರೂ, ಆಫ್ರಿಕನ್ ಆದರೂ, ಅಮೇರಿಕನ್ ಆದರೂ, ಪಾಕಿಸ್ತಾನ್ ಹಿಂದೂಸ್ತಾನ್, ಸ್ಪೇನ್ ನವರಾದರೂ ನಾವು ಅಹ್ಮದಿಯಾ ಜಮಾಅತಿಗೆ ಸೇರಿಕೊಂಡು ಒಬ್ಬರೇ ಆಧ್ಯಾತ್ಮಿಕ ತಂದೆಯ ಮಕ್ಕಳಾಗಿದ್ದೇವೆ. ಯಾರಿಗೂ ಕೋಮು, ವರ್ಣ, ಗೋತ್ರದ ಕಾರಣದಿಂದ ಮತ್ತೊಬ್ಬರ ಮೇಲೆ ಶ್ರೇಷ್ಠತೆಯಿಲ್ಲ. ಆದ್ದರಿಂದ ನಾವು ಈ ಸಂಗತಿಯನ್ನು ಅರಿತುಕೊಂಡು ಒಗ್ಗಟ್ಟಾಗಿ ಕೆಲಸ ಮಾಡಿದರೆ, ಪರಸ್ಪರ ಭಾವನೆಗಳಿಗೆ ಬೆಲೆಕೊಟ್ಟರೆ, ಅಲ್ಲಾಹನು ನಮಗೆ ಅಭಿವೃದ್ಧಿಗಳನ್ನು ದಯಪಾಲಿಸುವನು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಮ್ಮ ಜಮಾಅತನ್ನು ಅಲ್ಲಾಹನು ಒಂದು ಮಾದರಿಯನ್ನಾಗಿ ಮಾಡಲು ಬಯಸುತ್ತಾನೆ. (ಮಲ್‌ಫೂಝಾತ್, ಸಂಪುಟ–1, ಪುಟ–9, 1984 ಆವೃತ್ತಿ) ಕೇವಲ ಬಾಹ್ಯವಾದ ಮಾತುಗಳಿಂದ, ಯಾವುದೇ ಆಳವಾದ ಕೃತ್ಯಗಳಿಲ್ಲದೇ ಒಬ್ಬನಿಗೆ ಮಾದರಿಯಾಗಲು ಸಾಧ್ಯವೇ? ಮಾದರಿಯಾಗಲು ಬಹಳ ಕಠಿಣ ಪ್ರಯತ್ನ ಮಾಡಬೇಕಾಗುತ್ತದೆ. ತಮ್ಮ ಆರಾಧನೆಗಳ ಮಟ್ಟವನ್ನು ಉನ್ನತಗೊಳಿಸುತ್ತಾ, ತಮ್ಮ ನೈತಿಕ ಸ್ವಭಾವಗುಣಗಳ ಸ್ಥಿತಿಗಳನ್ನು ಸರಿಪಡಿಸುತ್ತಾ, ಪರಸ್ಪರ ಪ್ರೀತಿ ಮತ್ತು ಸಹೋದರತೆಯ ಸಂಬಂಧದ ಉನ್ನತ ಮಟ್ಟವನ್ನು ನೆಲೆನಿಲ್ಲಿಸುತ್ತಾ ನಾವು ಮಾದರಿಯಾಗುತ್ತಿದ್ದೇವೆಯೇ ಇಲ್ಲವೇ ಎಂದು ನಾವು ನೋಡಬೇಕಾಗುವುದು.

ನಮ್ಮ ಗುಣಮಟ್ಟವನ್ನು ಉನ್ನತಗೊಳಿಸಲು ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳುತ್ತಾರೆ: ಅಲ್ಲಾಹನು ಮುತ್ತಖಿಯನ್ನು ಪ್ರೀತಿಸುತ್ತಾನೆ. ಅಲ್ಲಾಹನ ವೈಭವವನ್ನು ನೆನಪಿಸಿಕೊಂಡು ಎಲ್ಲರೂ ಅಲ್ಲಾಹನಿಗೆ ಹೆದರಬೇಕು. ಅಲ್ಲಾಹನ ಭಯ ಹೃದಯಲ್ಲಿರಬೇಕು. ನೆನಪಿಡಿರಿ, ಎಲ್ಲರೂ ಅಲ್ಲಾಹನ ದಾಸರಾಗಿದ್ದೇವೆ. ಯಾರೊಂದಿಗೂ ದೌರ್ಜನ್ಯ ಮಾಡಬೇಡಿರಿ, ಕೋಪಗೊಳ್ಳಬೇಡಿರಿ, ಯಾರನ್ನೂ ನೀಚರೆಂದು ಭಾವಿಸಬೇಡಿರಿ. ಜಮಾಅತಿನಲ್ಲಿ ಒಬ್ಬ ವ್ಯಕ್ತಿ ಕೊಳಕನಾದರೆ, ಆತನು ಎಲ್ಲರನ್ನೂ ಕೊಳಕುಗೊಳಿಸುತ್ತಾನೆ.

(ಮಲ್‌ಫೂಝಾತ್, ಸಂಪುಟ–1, ಪುಟ–9, 1984 ಆವೃತ್ತಿ)

ಹಝ್ರತ್ ಮಸೀಹ್ ಮೌಊದ್(ಅ) ಮುಂದೆ ಹೇಳುತ್ತಾರೆ: ಹೃದಯದಲ್ಲಿ ದೇವಭಕ್ತಿಯಿರುವಾಗಲೇ ಉನ್ನತ ಮೌಲ್ಯಗಳು ಮತ್ತು ಉನ್ನತ ನೈತಿಕ ಸ್ವಭಾವಗುಣಗಳು ಉಂಟಾಗುತ್ತವೆ. "ನಮ್ಮ ಜಮಾಅತಿನವರಿಗೆ ವಿಶಿಷ್ಟವಾದ ದೇವಭಕ್ತಿಯ ಆವಶ್ಯಕತೆಯಿದೆ. ತಾನು ಅಲ್ಲಾಹನಿಂದ ಕಳುಹಿಸಿದ ವ್ಯಕ್ತಿಯಾಗಿದ್ದೇನೆ ಎಂದು ವಾದಿಸುವ ಒಬ್ಬರ ಜೊತೆಗೆ ಸಂಬಂಧವಿರಿಸಿರುವ ಕಾರಣದಿಂದ ವಿಶೇಷವಾಗಿ ಇದರ ಆವಶ್ಯಕತೆಯಿದೆ. ಹೀಗಾದರೆ, ಎಂತಹದ್ದೇ ರೀತಿಯ ಹಗೆ, ದ್ವೇಷಗಳು, ಶಿರ್ಕ್ ಅಥವಾ ಲೌಕಿಕತೆಯಲ್ಲಿ ಮುಳುಗಿರುವ ಜನರು ಕೂಡ ಈ ಎಲ್ಲ ವಿಪತ್ತುಗಳಿಂದ ಮುಕ್ತರಾಗುವರು."

(ಮಲ್‌ಫೂಝಾತ್, ಸಂಪುಟ–1, ಪುಟ–10, 1984 ಆವೃತ್ತಿ)

ಅವರು ಹೇಳುತ್ತಾರೆ: ಈ ಚಿಂತೆ ಎಲ್ಲ ಲೌಕಿಕವಾದ ಚಿಂತೆಗಳಿಗಿಂತ ಹೆಚ್ಚಾಗಿರಬೇಕು. (ಮಲ್‌ಫೂಝಾತ್, ಸಂಪುಟ–1, ಪುಟ–35, 1984 ಆವೃತ್ತಿ) ಎಂದರೆ ಹೃದಯದಲ್ಲಿ ತಖ್ವಾ ಇದೆಯೋ ಇಲ್ಲವೋ ಎಂಬ ಚಿಂತೆಯಿರಬೇಕು.

ಆದ್ದರಿಂದ ನಾವು ನಮ್ಮ ಬೈಅತ್ತಿನ ಹಕ್ಕುಗಳನ್ನು ಈಡೇರಿಸಬೇಕಾದರೆ, ಅಲ್ಲಾಹನು ಮಾಡಿದ ಔದಾರ್ಯಗಳಿಗೆ ಕೃತಜ್ಞತೆ ಅರ್ಪಿಸಬೇಕಾದರೆ, ನಾವು ನಮ್ಮ ಸ್ಥಿತಿಗತಿಗಳ ಬಗ್ಗೆ ಸದಾ ಅವಲೋಕನ ನಡೆಸಬೇಕಾದ ಆವಶ್ಯಕತೆಯಿದೆ. ಹಝ್ರತ್ ಮಸೀಹ್ ಮೌಊದ್(ಅ)ರ ಅಭಿಲಾಷೆ ಪ್ರಕಾರ ತಮ್ಮ ಜೀವಿತಗಳನ್ನು ಮಾಡುವವರಾಗಲು, ಧರ್ಮಕ್ಕೆ

ಲೌಕಿಕತೆಗಿಂತ ಆದ್ಯತೆ ನೀಡುವವರನ್ನಾಗಿ ಮಾಡಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ. ಅಲ್ಲಾಹನ ಭಯ ನಮ್ಮೊಳಗೆ ಉಂಟಾಗಲು, ನಾವು ಸತ್ಯವಾಗಿಯೂ **ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹು**ವಿನ ಹಕ್ಕನ್ನು ಈಡೇರಿಸುವವರಾಗಲು, ಹಝ್ರತ್ ಪೈಗಂಬರ್(ಸ)ರಿಗೆ ಅಲ್ಲಾಹನು ಸುವಾರ್ತೆ ನೀಡಿದ ಕೊನೆಗಾಲದ ಜಮಾಅತಿನವರಲ್ಲಿ ಸೇರಿದವರಾಗಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ.

ಇಂದಿನಿಂದ 28 ವರ್ಷಗಳಿಗೆ ಮುಂಚೆ ಇದೇ ದಿವಸ ಎಂದರೆ, ಅಕ್ಟೋಬರ್ 14ರಂದು ಈ ಮಸೀದಿಯ ಉದ್ಘಾಟನೆ ನಡೆದಿತ್ತು ಮತ್ತು ಇದನ್ನು ತೆರೆಯಲಾಗಿತ್ತು ಎಂದು ನಾನು ಬರುತ್ತಿರುವಾಗ ಅಮೀರ್ ಸಾಹಿಬ್ ನನ್ನೊಡನೆ ಹೇಳಿದ್ದರು.

ಈ ಮಸೀದಿಗೆ 28 ವರ್ಷಗಳು ಆಗಿವೆ. 28 ವರ್ಷಗಳಲ್ಲಿ ತಮ್ಮ ಆಧ್ಯಾತ್ಮಿಕತೆಯಲ್ಲಿ ಎಷ್ಟರ ಮಟ್ಟಿಗೆ ಪ್ರಗತಿ ಮಾಡಿದ್ದೀರಿ ಎಂದು ಇಲ್ಲಿ ಇರುವವರು, ಹಳೆಯ ಮತ್ತು ಹೊಸ ಅಹ್ಮದಿಯರು ಅವಲೋಕನ ನಡೆಸಿರಿ. ಎಷ್ಟರ ಮಟ್ಟಿಗೆ ಈ ಮಸೀದಿಯ ಹಕ್ಕನ್ನು ಈಡೇರಿಸಲು ಪ್ರಯತ್ನಿಸಿದ್ದೀರಿ.

ಅಲ್ಲಾಹನು ಮುಂದೆಯೂ ಅನೇಕ ಶತಮಾನಗಳನ್ನು ಈ ಮಸೀದಿಗೆ ಬರುವವರಿಗೆ ನೀಡಲಿ. ಈ ಮಸೀದಿ ಎಲ್ಲ ರೀತಿಯ ಲೌಕಿಕ ವಿಪತ್ತುಗಳಿಂದ ರಕ್ಷಣೆ ಪಡೆಯುವಂತಾಗಲಿ. ಆದರೆ ನಾವು ಮಸೀದಿಯ ಹಕ್ಕುಗಳನ್ನು ಈಡೇರಿಸುತ್ತಾ ಅದನ್ನು ಜನನಿಬಿಡಗೊಳಿಸಲು ಪ್ರಯತ್ನಿಸುವಾಗಲೇ ಯಥಾರ್ಥವಾದ ಹಕ್ಕು ಈಡೇರುವುದು. ಅಲ್ಲಾಹನು ಅದರ ಸೌಭಾಗ್ಯವನ್ನೂ ನಮಗೆ ನೀಡಲಿ.

*************

*(ಪುಟ ಸಂಖ್ಯೆ 02ರ ಉಳಿದ ಭಾಗ)*

**ಲಹಬಿವ್ವತಬ್– ವಾಕಾನ ಲಹೂ ಅಂಯ್ಯದ್‌ಖುಲ ಫೀಹಾ ಇಲ್ಲಾ ಖಾಇಫನ್**....... ಅಂದರೆ ಆ ಮುಂಬರುವ ಕಾಲವನ್ನು ಸಹ ನೀವು ನೆನಪಿಸಲ್ಲಿಟ್ಟುಕೊಳ್ಳಿ ಓರ್ವ ಫಿರ್‌ಔನ್ ನಿಮ್ಮನ್ನು ಕಾಫಿರ್ ಎಂದು ಘೋಷಿಸುವ ಮತ್ತು ತಮ್ಮ ಸ್ನೇಹಿತ ಹಾಮಾನ್ ಎಂದು ಹೇಳುವನು ನೀನು ತಕ್ಫೀರ್‌ನ ಅಗ್ನಿಯನ್ನು ಹೊತ್ತಿಸು. ಅಂದರೆ ಅಂತಹ ತೀಕ್ಷ್ಣವಾದ ಫತ್ವಾವನ್ನು ಬರಿ, ಈ ಫತ್ವಾವನ್ನು ನೋಡಿದ ಜನರು ಆ ವ್ಯಕ್ತಿಯ ಶತ್ರುಗಳಾಗುತ್ತಾರೆ ಮತ್ತು ಅವನನ್ನು ನಾಸ್ತಿಕನೆಂದು ಪರಿಗಣಿಸಲು ಪ್ರಾರಂಭಿಸುತ್ತಾರೆ. ಇದರಿಂದ ನಾನು ಆ ಮೂಸರ ದೇವನು ಅವನಿಗೆ ಸಹಾಯ ಮಾಡುತ್ತಾನೆಯೇ ಎಂದು ನೋಡುತ್ತೇನೆ. ಮತ್ತು ನಾನು ಅವನನ್ನು ಸುಳ್ಳು ಎಂದು ಭಾವಿಸುತ್ತೇನೆ. ಆ ಫತ್ವಾವನ್ನು ಬರೆದ ಅಬಿ ಲಹಬ್‌ನ ಎರಡು ಕೈಗಳು ನಾಶವಾದವು ಮತ್ತು ಅವನೂ ನಾಶವಾದನು. ಅವನಿಗೆ ಈ ವಿಷಯದಲ್ಲಿ ಬರಬಾರದಾಗಿತ್ತು ಆದರೆ ಭಯಭೀತನಾಗಿ....... ಈಗ ಈ ಸಂದರ್ಭದಲ್ಲಿ ಕಣ್ಣು ತೆರೆದು ನೋಡಬೇಕು ಅಲ್ಲಾಹನು ನನ್ನನ್ನು ಈ ಜಾಗದಲ್ಲಿ ಮೂಸಾ ಎಂದು ಪರಿಗಣಿಸಿದ್ದಾನೆ ಮತ್ತು ಫತ್ವ ನೀಡಿದವನಿಗೆ ಮತ್ತು ಫತ್ವ ಬರೆದವನಿಗೆ ಫಿರ್‌ಔನ್ ಮತ್ತು ಹಾಮಾನ್ ಎಂದು ನೇಮಿಸಿದನು. ಮೌಲ್ವಿ ಮುಹಿಯುದ್ದೀನ್ ತನ್ನ ಪತ್ರದ ದಿನಾಂಕದಿಂದ ತೋರಿಸಿರುವಂತೆ 1312 ಹಿಜರಿಯುಲ್ಲಿ ಈ ಇಲ್‌ಹಾಮುನ್ನು ಬಹಿರಂಗಪಡಿಸಿದನು. ಆದ್ದರಿಂದ ಪ್ರಸಿದ್ಧ ನುಡಿಮುತ್ತಿದೆ **ಅಲ್‌ಫಝ್ಲು ಲಿಲ್ ಮುತಖದ್ದಿಮಿ** ಇದರ ಪ್ರಕಾರ ಈ ಇಲ್‌ಹಾಮ್ ಮಾತ್ರ ಸೂಕ್ತ ಎಂದು ಅರ್ಥವಾಗುತ್ತದೆ ಮತ್ತೆ ಅದಕ್ಕೆ ಬೆಂಬಲವಾಗಿ ನನ್ನ ಗ್ರಂಥ ಇಝಾಲ ಔಹಾಮ್‌ನ ಪುಟ–855ರಲ್ಲಿ ಇನ್ನೊಂದು ಅಲ್ಲಾಹನ ವಹೀ ಇದೆ ಅದೇನೆಂದರೆ **ನುರೀದು ಅನ್ ನುನಝ್ಝಿಲ ಅಲೈಕ ಅಸ್ರಾರಮ್ಮನಸ್ಸಮಾಇ ವ ನುಮಝ್ಝಿಕುಲ್ ಅಲ್‌ದಾಅ ಕುಲ್ಲ ಮುಮಝ್ಝಿಖಿನ್ ವನುರೀ ಫಿರ್‌ಔನ ವ ಹಾಮಾನ ವಜುನೂದುಹುಮಾ ಮಾಕಾನು ಯಹ್‌ಝುರೂನ**– ಅಂದರೆ, ನಾವು ನಿಮ್ಮ ಮೇಲೆ ಆಕಾಶದ ಚಿಹ್ನೆಯನ್ನು ಕಳುಹಿಸಲು ಉದ್ದೇಶಿಸಿದ್ದೇವೆ ಮತ್ತು ನಾವು ಅವರೊಂದಿಗೆ ಶತ್ರುಗಳನ್ನು ನುಜ್ಜುಗುಜ್ಜುಗೊಳಿಸುತ್ತೇವೆ ಮತ್ತು ನಾವು ಫಿರ್‌ಔನ್ ಮತ್ತು ಹಾಮಾನ್ ಮತ್ತು ಅವರ ಸೈನಿಕರಿಗೆ ನಮ್ಮ ನೈಸರ್ಗಿಕ ಪವಾಡಗಳನ್ನು ಮತ್ತು ಶಕ್ತಿಯನ್ನು ತೋರಿಸುತ್ತೇವೆ, ಅದರಿಂದ ಅವರು ಭಯಭೀತರಾಗುತ್ತಿದ್ದರು. ಈಗ ನೋಡಿ ಈ ಜಾಗದಲ್ಲಿ ಅಲ್ಲಾಹನು ಮೊದಲ ಕಾಫಿರ್ ಅನ್ನು ಫಿರ್‌ಔನ್ ಹಾಗೂ ಹಾಮಾನ್ ಎಂದು ಹೆಸರಿಸಿದ್ದಾನೆ ಮತ್ತು ಈ ಗ್ರಂಥವೂ 1891ರಲ್ಲಿ ಮುದ್ರಿಸಲಾಯಿತು. ಆದ್ದರಿಂದ ಈ ಇಲ್‌ಹಾಮ್ ಮುಹಿಯುದ್ದೀನ್ ಅವರ ಇಲ್‌ಹಾಮ್‌ಗಿಂತ ನಾಲ್ಕು ವರ್ಷಗಳ ಹಿಂದೆಯೇ ಇದೆ ಏಕೆಂದರೆ ಈ ಇಲ್‌ಹಾಮ್ ಇರುವ ಅವರ ಪತ್ರದಲ್ಲಿ 1312 ಹಿಜರಿ ಎಂದು ಬರೆಯಲಾಗಿದೆ ಮತ್ತು ಅದು 1891 ರಲ್ಲಿದೆ. ಆದ್ದರಿಂದ, ಪೂರ್ವಭಾವಿಯಾಗಿರುವುದರ ರಿಯಾಯತಿಯು ಪೂರ್ವಭಾವಿಯಾಗಿದೆ ಮತ್ತು ಮೌಲ್ವಿ ಮುಹಿಯುದ್ದೀನ್ ಸಾಹಿಬ್ ಅವರ ಪತ್ರದಲ್ಲಿ ಅವರು ನನ್ನನ್ನು ಫಿರ್‌ಔನ್ ಎಂದು ಘೋಷಿಸಿದ್ದಾರೆ ಮತ್ತು ನಮ್ಮ ಸಹೋದರ ಹಕೀಮ್ ನೂರುದ್ದೀನ್ ಸಾಹಿಬ್ ಅವರನ್ನು ಹಾಮಾನ್ ಎಂದು ಘೋಷಿಸಿದ್ದಾರೆ, ನೀವು ಮೂಸನ ಗುಣಲಕ್ಷಣಗಳಾಗಿ ಮಾರ್ಪಟ್ಟಿದ್ದೀರಿ ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಆದರೆ ಫಿರ್‌ಔನ್ ಹಾಗೂ ಹಾಮಾನ್ ಇನ್ನೂ ಜೀವಂತವಾಗಿದ್ದಾರೆ ಮತ್ತು ಮೋಶೆಯು ಈ ಲೋಕದಿಂದ ನಿಧನ ಹೊಂದಿರುವುದು ಆಶ್ಚರ್ಯಕರವಾಗಿದೆ. ಇಲ್‌ಹಾಮ್ ಅನ್ನು ಸಾಂಕೇತಿಕವಾಗಿ ಪೂರೈಸಲು ನಮ್ಮನ್ನು ಕೊಂದು ಸಾಯಬೇಕಿತ್ತು, ಆದರೆ ಏನಾಯಿತು ಎಂದರೆ ನೀವೇ ನಾಶವಾದಿರಿ. ಇದಕ್ಕೆ ಯಾರಾದರೂ ಉತ್ತರಿಸಬಹುದೇ."

ಮೌಲ್ವಿ ಅಬ್ದ್ ಅಲ್–ರಹಮಾನ್ ಮುಹಿಯುದ್ದೀನ್ ಅವರು ತಮ್ಮ ಇಲ್‌ಹಾಮ್‌ನ ಆಧಾರದ ಮೇಲೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರನ್ನು (ನೌಝುಬಿಲ್ಲಾಹ್ ಮಿನ್ ಝಾಲಿಕ್) ಫಿರ್‌ಔನ್ ಮತ್ತು ಹಾಜಿ ಅಲ್–ಹರಮೀನ್ ಫಾಝಿಲ್ ಅಜ್ಲ್ ಹಕೀಮ್ ಮೌಲಾನಾ ನೂರುದ್ದೀನ್ ಖಲೀಫತ್ ಅಲ್–ಮಸಿಹ್ ಅಲ್–ಅವ್ವಲ್(ರ) ಅವರನ್ನು ಹಮಾನ್ ಎಂದು ಘೋಷಿಸಿದನು. ಇದರ ಬಗ್ಗೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ನೀಡಿರುವ ಉತ್ತರವನ್ನು ಮತ್ತು ತಮ್ಮ ಬಹುಮಾನದ ಪಂಥಾಹ್ವಾನವನ್ನು ಮುಂದಿನ ಸಂಚಿಕೆಯಲ್ಲಿ ಪ್ರಸ್ತುತಪಡಿಸುತ್ತೇವೆ, ಇನ್‌ಶಾಲ್ಲಾಹ್. **(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 10ರ ಉಳಿದ ಭಾಗ)*

ಆಕ್ಷೇಪಾರ್ಹನ ಹಕ್ಕನ್ನು ಉಲ್ಲಂಘಿಸುವುದಿಲ್ಲ. ಈ ಅರ್ಥಗಳಿಂದಾಗಿ, ಈ ಆಯತ್ ಹಿಂದೆ ವಿವರಿಸಿದ ಎಚ್ಚರಿಕೆಯ ಆಯತ್‌ಗಳಿಗೆ ಸಂಬಂಧಿಸಿದೆ. **(ತಫ್ಸೀರ್ ಕಬೀರ್, ಸಂಪುಟ–4, ಪುಟ–237, ಪ್ರಕಟಿತ ಖಾದಿಯಾನ್ 2010)**

...*...*...*...

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗಳಲ್ಲದೆ ಹುಝೂರ್ ಅನ್ವರ್(ಅತಬಿಅ)ರವರ ಹೊಸ ಖುತ್‌ಬ ಜುಮುಅ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಅ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ.

**(ಸಂಪಾದಕರು)**

## ದಿವ್ಯದೂತರು (ಮಲಾಯಿಕ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ." *(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 12)*

# ನನ್ನ ಸಂದೇಶ ಏನಂದರೆ

**ನಿಮ್ಮ ಮಕ್ಕಳ ತರಬೇತಿಯ ಕಡೆಗೆ ವಿಶೇಷ ಗಮನ ನೀಡಿರಿ, ಅವರಿಗೆ ಸಮಯವನ್ನು ನೀಡಿ, ಅವರ ಅಧ್ಯಯನಕ್ಕೆ ಗಮನ ನೀಡಿ, ಅವರನ್ನು ಜಮಾಅತ್‌ನೊಂದಿಗೆ ಸಂಪರ್ಕಿಸಲು ಗಮನ ನೀಡಿ.**

**ನಿಮ್ಮ ಮನೆಗಳಲ್ಲಿ ಎಂತಹ ವಾತಾವರಣವನ್ನು ನಿರ್ಮಿಸಿ ಎಂದರೆ ಅಲ್ಲಿ ನಿಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣವಾಗುತ್ತಿರಬೇಕು, ಮಕ್ಕಳು ಸಮಾಜದ ಉತ್ತಮ ಭಾಗವಾಗಲು ಮತ್ತು ದೇಶ ಮತ್ತು ರಾಷ್ಟ್ರದ ಅಭಿವೃದ್ಧಿಯಲ್ಲಿ ಭಾಗವಹಿಸುವಂತಾಗಲಿ.**

ಮಜ್ಲಿಸ್ ಅನ್ಸಾರ್ ಉಲ್ಲಾಹ್ ಭಾರತದ 44 ನೇ ವಾರ್ಷಿಕ ರಾಷ್ಟ್ರೀಯ ಇಜ್ತಿಮಾದ ಸಂದರ್ಭದಲ್ಲಿ, ಸಯ್ಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್(ಅತಬಿಅ) ಅವರಿಂದ ಈಮಾನ್‌ವರ್ಧಕ ವಿಶೇಷ **ಸಂದೇಶ**

ಅಕ್ಟೋಬರ್ 21, 22, 23 ಶುಕ್ರವಾರ, ಶನಿವಾರ, ಭಾನುವಾರದಂದು ನಡೆದ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) ಆಯೋಜಿಸಲಾಯಿತು. ಇದರಲ್ಲಿ ವಿವಿಧ ಶೈಕ್ಷಣಿಕ ವಿಷಯಗಳ ಕುರಿತು ವಿಶೇಷ ಅಧಿವೇಶನಗಳ ಹೊರತಾಗಿ, ಶೈಕ್ಷಣಿಕ ಮತ್ತು ಕ್ರೀಡಾ ಸ್ಪರ್ಧೆಗಳನ್ನೂ ಆಯೋಜಿಸಲಾಗಿತ್ತು. ಕೋವಿಡ್–19ರ ನಂತರ, ಈ ವರ್ಷದ ವಾರ್ಷಿಕ ಕೂಟಗಳು ಪೂರ್ಣ ಸಾಮರ್ಥ್ಯದೊಂದಿಗೆ ನಡೆದವು, ಇದರಲ್ಲಿ ಭಾರತದ ವಿವಿಧ ಪ್ರಾಂತ್ಯಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಜಮಾಚಿತ್‌ನ ಸ್ನೇಹಿತರು ಆಗಮಿಸಿದ್ದರು ಮತ್ತು ಖಾದಿಯಾನ್‌ನಲ್ಲಿ ಸಾಕಷ್ಟು ಸಂಭ್ರಮವಿತ್ತು. ಅಲ್‌ಹಮ್ದುಲಿಲ್ಲಾಹ್. ಈ ಸಂದರ್ಭದಲ್ಲಿ ಮಜ್ಲಿಸ್ ಅನ್ಸಾರುಲ್ಲಾ ಭಾರತಕ್ಕೆ ಹುಝೂರ್ ಅನ್ವರ್(ಅತಬಿಅ)ರವರು ಕಳುಹಿಸಿದ ಸಂದೇಶವನ್ನು ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸಲಾಗುತ್ತಿದೆ. (ಪತ್ರಿಕಾಂಗ)

بسم اللہ الرحمٰن الرحیم

نحمدہ ونصلی علی رسولہ الکریم وعلی عبدہ المسیح الموعود

خدا کے فضل اور رحم کے ساتھ

ھو الناصر

ಇಸ್ಲಾಮಾಬಾದ್, ಯುಕೆ

MA 18–10–2022

ಮಜ್ಲಿಸ್ ಅನ್ಸಾರ್ ಉಲ್ಲಾಹ್ ಭಾರತದ ಆತ್ಮೀಯ ಸದಸ್ಯರೇ, **ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹಿ ವ ಬರಕಾತಹು**

ಮಜ್ಲಿಸ್ ಅನ್ಸಾರುಲ್ಲಾಹ್ ಭಾರತವು ತನ್ನ ವಾರ್ಷಿಕ ಇಜ್ತಿಮಾವನ್ನು ಆಯೋಜಿಸಲು ಅವಕಾಶವನ್ನು ಪಡೆಯುತ್ತಿದೆ ಎಂದು ತಿಳಿದು ನನಗೆ ತುಂಬಾ ಸಂತೋಷವಾಗಿದೆ. ಸರ್ವಶಕ್ತನಾದ ಅಲ್ಲಾಹನು ಈ ಇಜ್ತಿಮಾವನ್ನು ಎಲ್ಲಾ ರೀತಿಯಲ್ಲೂ ಅನುಗ್ರಹಿಸಲಿ ಮತ್ತು ಉತ್ತಮ ಫಲಿತಾಂಶಗಳನ್ನು ನೀಡಲಿ. **ಆಮೀನ್.**

ಈ ಸಂದರ್ಭದಲ್ಲಿ ಸಂದೇಶ ಕಳುಹಿಸಲು ನನಲ್ಲಿ ಮನವಿ ಮಾಡಲಾಗಿದೆ. ಈ ಸಂದರ್ಭದಲ್ಲಿ ನನ್ನ ಸಂದೇಶವು ಹೀಗಿದೆ ನೀವು ನಿಮ್ಮ ಮಕ್ಕಳ ತರಬೇತಿಯ ಕಡೆ ವಿಶೇಷ ಗಮನ ನೀಡಿರಿ. ಅವರಿಗೆ ಸಮಯ ನೀಡಿ. ಅವರ ಅಧ್ಯಾಯನದ ಕಡೆ ಗಮನಹರಿಸಿ. ಅವರನ್ನು ಜಮಾಅತ್‌ನೊಂದಿಗೆ ಸಂಪರ್ಕವಿಡಲು ಗಮನ ನೀಡಿ. ನಿಮ್ಮ ಮನೆಗಳಲ್ಲಿ ಮಕ್ಕಳಿಗೆ ಉತ್ತಮ ತರಬೇತಿ ನೀಡುವ ವಾತಾವರಣವನ್ನು ನಿರ್ಮಿಸಿ. ಮಕ್ಕಳು ಸಮಾಜದ ಉತ್ತಮ ಭಾಗವಾಗಲು ಮತ್ತು ದೇಶ ಮತ್ತು ರಾಷ್ಟ್ರದ ಅಭಿವೃದ್ಧಿಯಲ್ಲಿ ಭಾಗವಹಿಸುವಂತಾಗಲಿ.

ಮಕ್ಕಳ ತರಬೇತಿ ನೀಡುವುದು ಸುಲಭದ ಕೆಲಸವಲ್ಲ ಮತ್ತು ವಿಶೇಷವಾಗಿ ಸೈತಾನನು ಸೃಷ್ಟಿಸಿದ ಆಸಕ್ತಿಗಳು ಪ್ರತಿದಿನ ವಿವಿಧ ಬಣ್ಣಗಳಲ್ಲಿ ನಮ್ಮ ಮುಂದೆ ಬರುತ್ತಿರುವ ಈ ಯುಗದಲ್ಲಿ ಇದು ತುಂಬಾ ಕಷ್ಟಕರವಾದ ಕೆಲಸವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ, ಆದರೆ ಸರ್ವಶಕ್ತನಾದ ಅಲ್ಲಾಹನು ದುಆಗಳು ಮತ್ತು ವಿಧಾನಗಳನ್ನು ತಿಳಿಸಿದ್ದಾನೆ ಆದ್ದರಿಂದ ನಾವು ಬಯಸಿದರೆ, ನಾವು ನಮ್ಮನ್ನು ಮತ್ತು ನಮ್ಮ ಮಕ್ಕಳನ್ನು ಸೈತಾನನ ದಾಳಿಯಿಂದ ರಕ್ಷಿಸಿಕೊಳ್ಳಬಹುದು. ಸರ್ವಶಕ್ತನಾದ ಅಲ್ಲಾಹನು ಜಗತ್ತಿಗೆ ಕಳುಹಿಸಿದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕ್ರಾಂತಿಯ ಭಾಗವಾಗಲು, ನಾವು ನಮ್ಮ ಎಲ್ಲಾ ಕೌಶಲ್ಯ ಮತ್ತು ಪ್ರತಿಭೆಗಳನ್ನು ಬಳಸಬೇಕು ಮತ್ತು ನಮ್ಮ ಸಂತತಿಯಲ್ಲಿಯೂ ಈ ಚೈತನ್ಯವನ್ನು ತುಂಬಬೇಕು. ನಮ್ಮ ಉದ್ದೇಶಗಳನ್ನು ಈಡೇರಿಸುವುದಕ್ಕೆ ದುಆ ಸಹ ಮಾಡುತ್ತಿರಬೇಕು. ಸಮಾಜದ ಈ ಎಲ್ಲಾ ಕೊಳಕುಗಳ ಹೊರತಾಗಿಯೂ ಸೈತಾನನನ್ನು ನಾವು ಯಶಸ್ವಿಯಾಗಲು ಬಿಡಬಾರದು ಎಂದು ನಾವು ಅವರಿಗೆ ತರಬೇತಿ ನೀಡಬೇಕು. ಮತ್ತು ನಾವು ಜಗತ್ತಿನಲ್ಲಿ ಅಲ್ಲಾಹನ ಆಳ್ವಿಕೆಯನ್ನು ಸ್ಥಾಪಿಸಲು ಪ್ರಯತ್ನಿಸಬೇಕು. ಇನ್‌ಶಾಅಲ್ಲಾಹ್

ಪವಿತ್ರ ಖುರ್‌ಆನ್‌ನಲ್ಲಿ, ಹಝ್ರತ್ ಝಕರೀಯ ಅಲೈಹಿಸ್ಸಲಾಮ್ ಅವರನ್ನು ಉಲ್ಲೇಖಿಸಿ, ಸೂರಾ ಅಲ್–ಅಂಬಿಯಾದಲ್ಲಿ, ಈ ಪ್ರಾರ್ಥನೆಯನ್ನು ಸಹ ಉಲ್ಲೇಖಿಸಲಾಗಿದೆ: **ರಬ್ಬಿ ಲಾ ನಝರ್‌ನೀ ಫರ್‌ದಂವ್ವ ಅನ್ತ ಖೈರುಲ್ ವಾರಿಸೀನ್** (ಅಲ್ ಅಂಬಿಯಾ: 90) ಅಂದರೆ ಓ ನನ್ನ ದೇವ, ನನ್ನನ್ನು ಒಂಟಿಯಾಗಿ ಬಿಡಬೇಡ ಮತ್ತು ನೀನು ಎಲ್ಲಾ ವಾರಸ್ಸುದಾರರಲ್ಲಿ ಉತ್ತಮನಾಗಿದ್ದೀಯ. ಈ ಪ್ರಾರ್ಥನೆಯಲ್ಲಿಯೂ ಅಲ್ಲಾಹನನ್ನು **ಖೈರುಲ್ ವಾರಿಸೀನ್** ಎಂದು ಹೇಳಿದಾಗ, ಮಕ್ಕಳ ಪ್ರಾರ್ಥನೆಯು ಕೇವಲ ಮಕ್ಕಳನ್ನು ಹೊಂದಲು ಮತ್ತು ಲೌಕಿಕ ವಿಷಯಗಳಲ್ಲಿ ವಾರಸುದಾರರಾಗುವುದಕ್ಕೆ ಮಾತ್ರವಲ್ಲ, ಬದಲಿಗೆ ಎಂತಹ ವಾರಸುದಾರರು ಅಲ್ಲಾಹನ ಕಡೆಯಿಂದ ನೀಡಬೇಕು ಎಂದರೆ ಅವರು ಧರ್ಮವನ್ನು ಲೌಕಿಕತೆಗೆ ಆದ್ಯತೆ ನೀಡುವವರಾಗಿರಬೇಕು. ಇದರಿಂದ ಯಾರು ಧರ್ಮವನ್ನು ಆದ್ಯತೆ ನೀಡುತ್ತಾರೋ ಅಂತಹವರು ಈ ದುಆ ಮಾಡುತ್ತಾರೆ ಎಂದು ಸ್ಪಷ್ಟವಾಗುತ್ತದೆ. ಲೌಕಿಕ ವ್ಯವಹಾರಗಳಲ್ಲಿ ಮುಳುಗಿರುವ ವ್ಯಕ್ತಿ ನಿಷ್ಠಾವಂತ ವಾರಿಸುದಾರನನ್ನು ಹೇಗೆ ಬಯಸುತ್ತಾನೆ?

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ಆದ್ದರಿಂದ ನೀವು ಸ್ವತಃ ಸಜ್ಜನಾಗಿರಿ ಮತ್ತು ನಿಮ್ಮ ಮಕ್ಕಳಿಗೆ ಒಳ್ಳೆಯತನ ಮತ್ತು ಧರ್ಮನಿಷ್ಠೆಗೆ ಉತ್ತಮ ಮಾದರಿಯಾಗಿರಿ ಮತ್ತು ಅವರನ್ನು ಧರ್ಮನಿಷ್ಠರು ಹಾಗೂ ಧಾರ್ಮಿಕ ವ್ಯಕ್ತಿಯನ್ನಾಗಿ ಮಾಡಲು ಪ್ರಯತ್ನಿಸಿರಿ ಮತ್ತು ಪ್ರಾರ್ಥಿಸಿರಿ. ನೀವು ಅವರಿಗಾಗಿ ಎಷ್ಟು ಸಂಪತ್ತನ್ನು ಸಂಗ್ರಹಿಸಲು ಪ್ರಯತ್ನಿಸುತ್ತೀರೋ, ಈ ವಿಷಯದಲ್ಲಿಯೂ ಅಷ್ಟೇ ಪ್ರಯತ್ನಿಸಿ." (ಮಲ್‌ಫೂಝಾತ್, ಸಂಪುಟ–8, ಪುಟ–109, 1985 ಆವೃತ್ತಿ, ಇಂಗ್ಲೆಂಡ್‌ನಲ್ಲಿ ಪ್ರಕಟಿಸಲಾಗಿದೆ)

ಆದ್ದರಿಂದ, ಮಕ್ಕಳಿಗಾಗಿ ದುಆ ಮತ್ತು ಬಯಕೆಯು ಲೋಕದ ಮೇಲೆ ಧರ್ಮವನ್ನು ಇರಿಸುವ ಮಕ್ಕಳಾಗಲಿ ಎಂಬ ಚಿಂತನೆ ಮತ್ತು ಪ್ರಾರ್ಥನೆಯೊಂದಿಗೆ ಇರಬೇಕು. ಇದು ನಮ್ಮ ಪೋಷಕರು ಮತ್ತು ಕುಟುಂಬದ ಗೌರವವನ್ನು ಸ್ಥಾಪಿಸುವುದು. ತಮ್ಮ ಅಜ್ಜ ಮುತ್ತಜ್ಜನ ಹೆಸರನ್ನು ಗೌರವಿಸುವಂತಾಗಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಅಲ್ಲಾಹನ ಸಹಾಯವು ಯಾವಾಗಲೂ ಒಳ್ಳೆಯತನದಲ್ಲಿ ಮುನ್ನಡೆಯುವವರಿಗೆ ಸೇರಿರುತ್ತದೆ." ಅವರು ಹೇಳಿದರು, "ಅವರು ಒಂದೇ ಸ್ಥಳದಲ್ಲಿ ಉಳಿದಿರುವುದಿಲ್ಲ ಮತ್ತು ಅವರು ಉತ್ತಮ ಅಂತ್ಯವನ್ನು ಹೊಂದಿರುತ್ತಾರೆ." ಮತ್ತು ಒಳ್ಳೆಯ ಅಂತ್ಯಕ್ಕಾಗಿ, ಅವರು(ಅ) ಹೇಳಿದರು, "ನೀವು ನಿಮಗಾಗಿ ಮತ್ತು ನಿಮ್ಮ ಹೆಂಡತಿ ಮತ್ತು ಮಕ್ಕಳಿಗಾಗಿ ಪ್ರಾರ್ಥಿಸುತ್ತಾ ಇರಿ."

ನಾವು ನಮ್ಮ ಪ್ರತಿಯೊಬ್ಬ ಮಕ್ಕಳಿಗೆ ಅತ್ಯುತ್ತಮ ಉದಾಹರಣೆಯಾಗಲು ಸರ್ವಶಕ್ತನಾದ ಅಲ್ಲಾಹನು ನಮಗೆ ಸಹಾಯ ನೀಡಲಿ. ಧರ್ಮವನ್ನು ಪ್ರಪಂಚದ ಮೇಲೆ ಆದ್ಯತೆ ನೀಡುವ ವಾಗ್ದಾನವನ್ನು ಈಡೇರಿಸುವಂತಾಗಲಿ. ಸರ್ವಶಕ್ತನಾದ ಅಲ್ಲಾಹನು ನಮ್ಮ ಮಕ್ಕಳನ್ನು ಯಾವಾಗಲೂ ನಮ್ಮ ಕಣ್ಣಿಗೆ ತಂಪು ನೀಡುವವರಾಗಲಿ ಮತ್ತು ಈ ಸರಣಿಯು ಮುಂದುವರಿಯುತ್ತಾ ಇರಲಿ. ಆಮೀನ್

ವಸ್ಸಲಾಮ್

ಮಿರ್ಝಾ ಮಸ್ರೂರ್ ಅಹ್ಮದ್

ಖಲೀಫತುಲ್ ಮಾಸೀಹ್ ಖಾಮಿಸ್

**ಪವಿತ್ರ ಖುರ್‌ಆನ್‌ನ ಯಾವುದೇ ಆಜ್ಞೆಯಾಗಲಿ, ಯಾವುದೇ ಪುರಾವೆಗಳು ಮೂಲತಃ ವಿಭಿನ್ನವಾಗಿತ್ತು ಮತ್ತು ನಂತರ ಬದಲಾಗಿದೆ ಹಾಗೂ ಒಂದು ಆಯತನ್ನು ಮತ್ತೊಂದು ಆಯತ್‌ದಿಂದ ಬದಲಾಯಿಸಲಾಗಿದೆ ಎಂದು ಸಾಬೀತುಪಡಿಸಲು ಇತಿಹಾಸದಿಂದ ಸಾಧ್ಯವಿಲ್ಲ. ಈ ಸಮಸ್ಯೆಯು ತುಂಬಾ ಸ್ಪಷ್ಟವಾಗಿದೆ ಎಂದು ತೋರುತ್ತದೆ ಆದರೆ ಜನರು ಯಾವಾಗಲೂ ಅದರ ಮೇಲೆ ಎಡವಿ ಬೀಳುತ್ತಾರೆ. ಇದಕ್ಕೆ ಕಾರಣ, ಜನರು ಮಾತುಗಳನ್ನು ಬದಲಾಯಿಸುವುದನ್ನು ಸುಳ್ಳು ಎಂದು ಪರಿಗಣಿಸುತ್ತಾರೆ, ಆದರೆ ಶಿಕ್ಷೆಯನ್ನು ಬದಲಾಯಿಸುವುದು ಸುಳ್ಳಲ್ಲ, ವಾಗ್ದಾನವನ್ನು ಬದಲಾಯಿಸುವುದು ಸುಳ್ಳಾಗಿರುತ್ತದೆ.**

ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಅನ್ನಹಲ್ ಆಯತ್ 102 **ವಇಝಾ ಬದ್ದಲ್‌ನಾ ಆಯತಮ್ಮಕಾನ ಆಯತಿನ್; ವಲ್ಲಾಹು ಅಅ್‌ಲಮು ಬಿಮಾ ಯುನಝ್ಝಿಲು ಖಾಲೂ ಇನ್ನಮಾ ಅನ್ತ ಮುಫ್ತರಿನ್; ಬಲ್ ಅಕ್ಸರುಹುಮ್ ಲಾ ಯಅ್‌ಲಮೂನ್** ಅಂದರೆ: ನಾವು ಒಂದು ದೃಷ್ಟಾಂತದ ಬದಲಿಗೆ ಇನ್ನೊಂದು ದೃಷ್ಟಾಂತವನ್ನು ತರುವಾಗ – ತಾನು ಅವತೀರ್ಣಗೊಳಿಸುವುದರ ಬಗ್ಗೆ ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ – 'ನೀನು ಸ್ವಪ್ಪನೆ ಮಾಡುವವನಾಗಿರುವಿರಿ' ಎಂದು ಅವರು ಹೇಳುತ್ತಾರೆ. ಹಾಗಲ್ಲ, ಅವರಲ್ಲಿ ಹೆಚ್ಚಿನವರಿಗೆ ತಿಳುವಳಿಕೆ ಇಲ್ಲ. ಇದರ ವ್ಯಾಖ್ಯಾನದಲ್ಲಿ ಹೇಳುತ್ತಾರೆ: ಕೆಲವು ವ್ಯಾಖ್ಯಾನಕಾರರು ಈ ಆಯತ್‌ನ ಕುರಿತು ಹೀಗೆ ಹೇಳಿದ್ದಾರೆ: ಪವಿತ್ರ ಖುರ್‌ಆನ್‌ನ ಒಂದು ಆಯತ್ ಅನ್ನು ರದ್ದುಗೊಂಡು ಮತ್ತೊಂದು ಆಯತ್ ಅವತರಿಸಿದ್ದರೆ ನಾಸ್ತಿಕರು ನೀವು ಸುಳ್ಳುಗಾರರಾಗಿದ್ದೀರಿ ಪವಿತ್ರ ಖುರ್‌ಆನ್ ಅಲ್ಲಾಹನ ವಾಕ್ಯವಾಗಿದ್ದರೆ ಅದರ ಆಯತ್‌ಗಳು ಏಕೆ ರದ್ದುಗೊಳಿಸಲ್ಪಟ್ಟವು ಎಂದು ಆಕ್ಷೇಪಿಸುತ್ತಿದ್ದರು.

ನನ್ನ ಪ್ರಕಾರ, ಈ ಅರ್ಥವು ಸರಿಯಲ್ಲ ಏಕೆಂದರೆ ಇತಿಹಾಸದಿಂದ ಒಂದೇ ಒಂದು ಆಯತನ್ನು ಬದಲಿಸಿ ಅದರ ಜಾಗದಲ್ಲಿ ಮತ್ತೊಂದು ಆಯತನ್ನು ಇರಿಸಲಾಗಿದೆ ಎಂದು ಸಾಬೀತ್ ಆಗುವುದಿಲ್ಲ. ಹೀಗೆ ಸಂಭವಿಸುತ್ತಿದ್ದರೆ ಪವಿತ್ರ ಖುರ್‌ಆನ್‌ನ ಸಾವಿರಾರು ಹಾಫಿಝ್‌ಗಳು (ಖುರ್‌ಆನ್ ಕಂಠಪಾಠ ಮಾಡಿದವರು) ಪ್ರವಾದಿ(ಸ) ರವರ ಜೀವಿತಕಾಲದಲ್ಲಿಯೇ ಪವಿತ್ರ ಖುರ್‌ಆನ್ ಅನ್ನು ಕಂಠಪಾಠ ಮಾಡಿದ್ದರು. ಅವರು ನಮಗೆ ಮೊದಲು ಆ ಆಯತ್‌ನ ನಂತರ ಈ ಆಯತ್ ಅನ್ನು ಕಂಠಪಾಠ ಮಾಡಿಸಿದ್ದರು. ಆದರೆ ಅದರ ನಂತರ ಅದನ್ನು ಬದಲಾಯಿಸಿ ಆ ಆಯತ್ ಅನ್ನು ಕಂಠಪಾಠ ಮಾಡಿಸಿದರು ಎಂದು ಅವರು ಸಾಕ್ಷಿ ನೀಡುತ್ತಿದ್ದರು. ಈ ರೀತಿಯ ಪುರಾವೆಗಳ ಅನುಪಸ್ಥಿತಿಯು ಈ ವಿಷಯದ ಬಗ್ಗೆ ಚಾಲ್ತಿಯಲ್ಲಿರುವ ಕಲ್ಪನೆಗಳು ಕೇವಲ ಊಹೆಗಳನ್ನು ಆಧರಿಸಿವೆ ಮತ್ತು ಜ್ಞಾನದ ಮೇಲೆ ಅಲ್ಲ ಎಂದು ತೋರಿಸುತ್ತದೆ.

ಪ್ರವಾದಿ(ಸ) ರವರ ಕಾಲದಲ್ಲಿ ಕೆಲವು ನಿಯಮಗಳನ್ನು ಬದಲಾಯಿಸಲಾಗಿದೆ ಎಂಬುದರ ಬಗ್ಗೆ ನಾನು ನಿರಾಕರಿಸುವುದಿಲ್ಲ. ಆದರೆ ಪವಿತ್ರ ಖುರ್‌ಆನ್‌ನ ಯಾವುದೇ ಆಜ್ಞೆಯು ಮೊದಲು ವಿಭಿನ್ನವಾಗಿತ್ತು ಮತ್ತು ನಂತರ ಬದಲಾಯಿಸಲ್ಪಟ್ಟಿದೆ ಎಂಬುದಕ್ಕೆ ಯಾವುದೇ ಪುರಾವೆಗಳು ನನಗೆ ಕಂಡುಬಂದಿಲ್ಲ. ನನ್ನ ಪ್ರಕಾರ ತಾತ್ಕಾಲಿಕವಾಗಿದ್ದ ಆಜ್ಞೆಗಳು ಪವಿತ್ರ ಖುರ್‌ಆನ್ ಅಲ್ಲದ ದೈವವಾಣಿಯಿಂದ ಬಹಿರಂಗಗೊಂಡಿವೆ. ಅವು ಪವಿತ್ರ ಖುರ್‌ಆನ್‌ನಲ್ಲಿ ಬಹಿರಂಗವಾಗಿಲ್ಲ. ಆದ್ದರಿಂದ, ಪವಿತ್ರ ಖುರ್‌ಆನ್ ಅನ್ನು ಬದಲಾಯಿಸುವ ಅಗತ್ಯವಾಗುತ್ತಿರಲಿಲ್ಲ.

ಪವಿತ್ರ ಖುರ್‌ಆನ್‌ನ ಆಯತ್‌ಗಳನ್ನು ಎಂದಿಗೂ ಬದಲಾಯಿಸದಿದ್ದರೆ, ಈ ಪದ್ಯದ ಅರ್ಥವೇನು ಎಂಬ ಪ್ರಶ್ನೆಯನ್ನು ಕೇಳಬಹುದು? ಅದಕ್ಕೆ ಉತ್ತರ ಪವಿತ್ರ ಖುರ್‌ಆನ್‌ನಲ್ಲಿ 'ಆಯತ್' ಎಂಬ ಪದವು ಸಾಮಾನ್ಯವಾಗಿ ಬಳಸಲಾಗಿದೆ. ಅದರ ಅರ್ಥ ಆಕಾಶದ ದೃಷ್ಟಾಂತಗಳು ಎಂದಾಗಿದೆ ಮತ್ತು ಈ ಸ್ಥಳದಲ್ಲಿಯೂ ಅದೇ ಅರ್ಥವಾಗಿದೆ. ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: ನಾವು ಒಂದು ದೃಷ್ಟಾಂತವನ್ನು ಬದಲಾಯಿಸಿ ಅದರ ಬದಲಿಗೆ ಮತ್ತೊಂದು ದೃಷ್ಟಾಂತವನ್ನು ತಂದರೆ ಮತ್ತು ಹಾಗೆ ಮಾಡುವುದು ಆಕ್ಷೇಪಾರ್ಹವಲ್ಲ, ಏಕೆಂದರೆ ಯಾವ ದೃಷ್ಟಾಂತವೂ ಯಾವ ಸಂದರ್ಭಕ್ಕೆ ಸೂಕ್ತವಾಗಿದೆ ಎಂದು ಅಲ್ಲಾಹನಿಗೆ ಮಾತ್ರ ತಿಳಿದಿದೆ, ಆಗ ಅವಿಶ್ವಾಸಿಗಳು ಆಕ್ಷೇಪಿಸಲು ಪ್ರಾರಂಭಿಸುತ್ತಾರೆ ಮತ್ತು ನೀವು ಸುಳ್ಳುಗಾರ ಎಂದು ಅವರು ಹೇಳುತ್ತಾರೆ. ಆದರೆ ಈ ಆಕ್ಷೇಪಣೆ ಅವರ ಅಜ್ಞಾನದ ಮೇಲೆ ಆಧಾರಿತವಾಗಿದೆ. ಇದು ಪ್ರತಿಯೊಬ್ಬ ಪ್ರವಾದಿಯ ಕಾಲದಲ್ಲಿ ಕಂಡುಬರುವ ಕಾನೂನಾಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಪ್ರತಿಯೊಬ್ಬ ಪ್ರವಾದಿಯವರಿಗೆ ಕೆಲವು ಎಚ್ಚರಿಕೆಯ ವಿಷಯಗಳನ್ನು ನೀಡಲಾಗುತ್ತದೆ, ಅದು ನಿಜವಾಗಿ ಉದ್ದೇಶಿಸಲಾದ ಜನರ ಹೃದಯದ ಸ್ಥಿತಿಯಿಂದ ಷರತ್ತುಬದ್ಧವಾಗಿರುತ್ತದೆ. ಅವರು ತಮ್ಮ ಮನಸ್ಸಿನ ಪರಿಸ್ಥಿತಿಯನ್ನು ಬದಲಾಯಿಸಿಕೊಂಡರೆ ಆ ಎಚ್ಚರಿಕೆಯು ರದ್ದುಗೊಳಿಸಲಾಗುತ್ತದೆ. ಉದಾಹರಣೆಗೆ: ಪವಿತ್ರ ಖುರ್‌ಆನ್‌ನಲ್ಲಿ ಹಝ್ರತ್ ಯುನುಸ್(ಅ)ರ ಸಮೂದಾಯದ ಘಟನೆಯನ್ನು ವಿವರಿಸಲಾಗಿದೆ ಅಂದರೆ ಅವರು ನಶಿಸಿ ಹೋಗುವ ಸುದ್ದಿಯನ್ನು ಹಝ್ರತ್ ಯೂನುಸ್(ಅ) ಅವರ ಮೂಲಕ ನೀಡಲಾಗಿತ್ತು ಆದರೆ ನಂತರ ಅವರ ತೌಬದಿಂದ (ಪಶ್ಚಾತ್ತಾಪದಿಂದಾಗಿ) ಅದನ್ನು ಬದಲಾಯಿಸಲಾಯಿತು. (ಯೂನುಸ್: ರುಕು–10)

ಎಚ್ಚರಿಕೆಯ ದೈವವಾಣಿಗಳ ಬಗ್ಗೆ ಸಾಮಾನ್ಯ ಕಾನೂನು ಇದೆ ಅಂದರೆ ವಿರೋಧಿಗಳು ತೌಬ ಮಾಡಿದರೆ (ಪಶ್ಚಾತ್ತಾಪಪಟ್ಟರೆ) ಉದ್ದೇಶಿತ ಶಿಕ್ಷೆಯನ್ನು ತಪ್ಪಿಸುತ್ತದೆ ಎಂದು. ಹೌದು, ವಾಗ್ದಾನದ ಸುದ್ದಿಯು ಖಂಡಿತವಾಗಿಯೂ ಈಡೇರುತ್ತಿದೆ, ಆದರೆ ಈ ಬಗ್ಗೆ ಅಲ್ಲಾಹನ ಸುನ್ನತ್ ಏನೆಂದರೆ, ವಾಗ್ದಾನ ಇರುವ ಸಮೂದಾಯವು ಪೂರ್ಣ ತ್ಯಾಗಗಳು ಮಾಡದಿದ್ದರೆ ಮತ್ತು ಸಂಪೂರ್ಣ ವಿಧೇಯತೆಯನ್ನು ತೋರಿಸದಿದ್ದರೆ, ಅದರ ನೆರವೇರಿಕೆಯು ವಿಳಂಬವಾಗುತ್ತದೆ. ಉದಾಹರಣೆಗೆ: ಹಝ್ರತ್ ಮೂಸ(ಅ)ರವರ ವಿಷಯವಾಗಿತ್ತು. ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ಅವರು ಹಝ್ರತ್ ಮೂಸಾ(ಅ) ಅವರನ್ನು ಪದೇ ಪದೇ ಅವಿಧೇಯರಾದಾಗ, ಹಝ್ರತ್ ಮೂಸಾ(ಅ) ಅವರನ್ನು ವಾಗ್ದಾತ್ತ ಬೂಮಿಯಲ್ಲಿ ಪ್ರವೇಶಿಸಲು ಈಜಿಪ್ಟ್‌ನಿಂದ ಕರೆತಂದರು, ಅವರ ವಿಜಯವನ್ನು ನಲವತ್ತು ವರ್ಷಗಳ ಕಾಲ ತಡೆಯಲಾಗಿತ್ತು.......

ಮೇಲೆ ತಿಳಿಸಿದ ಕಾನೂನಿನ ಪ್ರಕಾರ, ಎಚ್ಚರಿಕೆಯ ಭವಿಷ್ಯವನ್ನು ತಪ್ಪಿಸಿದಾಗ, ಅವಿಶ್ವಾಸಿಗಳು ಇವನು ಸತ್ಯಾವಂತನಾಗಿರುತ್ತಿದ್ದರೆ, ಅದು ಏಕೆ ಈಡೇರಲಿಲ್ಲ? ಹೀಗಾಗಿ ಇವನು ಸುಳ್ಳುಗಾರನಾಗಿದ್ದಾನೆ ಎಂದು ಕೂಗುತ್ತಾರೆ. ಅವರು ಪವಿತ್ರ ಪ್ರವಾದಿ(ಸ) ರವರ ಬಗ್ಗೆಯೂ ಇದೇ ರೀತಿಯ ಆಕ್ಷೇಪಣೆಗಳನ್ನು ಮಾಡುತ್ತಿದ್ದರು. ಇದಕ್ಕೆ ಸಂಬಂಧಿಸಿದಂತೆ, ಸರ್ವಶಕ್ತನಾದ ಅಲ್ಲಾಹನು ಆಯತ್‌ಗಳನ್ನು ಒಂದು ಉದ್ದೇಶಕ್ಕಾಗಿ ಬಹಿರಂಗಪಡಿಸಲಾಗುತ್ತದೆ ಎಂದು ಹೇಳುತ್ತಾನೆ. ಒಬ್ಬ ವ್ಯಕ್ತಿಯು ತನ್ನನ್ನು ತಾನು ಸುಧಾರಿಸಿಕೊಂಡಿರುವುದನ್ನು ನಾವು ನೋಡಿದಾಗ, ನಾವು ಅವನ ಬಗ್ಗೆ ನಮ್ಮ ಆದೇಶವನ್ನು ಬದಲಾಯಿಸುತ್ತೇವೆ ಮತ್ತು ಅವನ ಶಿಕ್ಷೆಯನ್ನು ರದ್ದುಗೊಳಿಸುತ್ತೇವೆ. ಮಾತ್ರವಲ್ಲ ಅವನಿಗಾಗಿ ಕರುಣೆಯ ಸಂಕೇತವನ್ನು ತೋರಿಸುತ್ತೇವೆ ಏಕೆಂದರೆ ನಮ್ಮ ಉದ್ದೇಶ ಶಿಕ್ಷಿಸುವುದಲ್ಲ ಬದಲಾಗಿ ಸುಧಾರಣೆ ತರುವುದಾಗಿದೆ. ಇಂತಹ ಹಲವಾರು ಸಂದರ್ಭಗಳು ಪ್ರವಾದಿ(ಸ) ರವರ ಜೀವನದಲ್ಲಿ ನಡೆದಿವೆ. ಉದಾಹರಣೆಗೆ, ಪವಿತ್ರ ಖುರ್‌ಆನ್‌ನಲ್ಲಿ ಮಕ್ಕಾದ ಅವಿಶ್ವಾಸಿಗರನ್ನು ಸರ್ವಶಕ್ತನಾದ ಅಲ್ಲಾಹನು ಹೀಗೆ ಉಲ್ಲೇಖಿಸುತ್ತಾನೆ: **ಲಾಯುಮಿನೂನ್** (ಬಖರ: ರುಕು–1) ಇದು ಶಿಕ್ಷೆಯ ಸುದ್ದಿಯಾಗಿದೆ, ಆದರೆ ನಂತರ ಅವರಲ್ಲಿ ಹಲವರು ನಂಬಿದರು. ಇದರಿಂದಾಗಿ ಅಲ್ಲಾಹನ ಭಯವುಳ್ಳವರ ಶಿಕ್ಷೆಯನ್ನು ಬದಲಾಯಿಸಲಾಯಿತು ಮತ್ತು ಅವರಿಗೆ ನಂಬಿಕೆಯನ್ನು ನೀಡಲಾಯಿತು.

ಇದು ತುಂಬಾ ಸ್ಪಷ್ಟವಾದ ಸಮಸ್ಯೆ ಎಂದು ತೋರುತ್ತದೆ, ಆದರೆ ಜನರು ಯಾವಾಗಲೂ ಅದರ ಬಗ್ಗೆ ಎಡವಿ ಬೀಳುತ್ತಾರೆ ಮತ್ತು ಅದಕ್ಕೆ ಕಾರಣ ಜನರು ವಿಷಯವನ್ನು ಬದಲಾಯಿಸುವುದನ್ನು ಸುಳ್ಳು ಎಂದು ಪರಿಗಣಿಸುತ್ತಾರೆ. ಆದರೆ, ಶಿಕ್ಷೆಯನ್ನು ಬದಲಾಯಿಸುವುದು ಸುಳ್ಳಲ್ಲ. ವಾಗ್ದಾನವನ್ನು ಬದಲಾಯಿಸುವುದು ಸುಳ್ಳು ಆಗಿದೆ. ಆದ್ದರಿಂದ, ಅರೇಬಿಕ್ ನಲ್ಲಿ, ವಾಗ್ದಾನವನ್ನು ಬದಲಾಯಿಸುವುದನ್ನು ಸುಳ್ಳು ಎಂದು ಕರೆಯಲಾಗುತ್ತದೆ. ವಈದ್ ಅಂದರೆ ಶಿಕ್ಷೆಯ ಸುದ್ದಿಯನ್ನು ಬದಲಾಯಿಸುವುದಕ್ಕೆ ಸುಳ್ಳು ಎಂದು ಹೇಳಲಾಗುವುದಿಲ್ಲ ಬದಲಿಗೆ ಅದನ್ನು ಕರುಣೆ ಮತ್ತು ದಯೆ ಎಂದು ಕರೆಯಲಾಗುತ್ತದೆ. ಇದನ್ನು ಅಕ್ರಾಬ್‌ನಲ್ಲಿ ಬರೆಯಲಾಗಿದೆ. **ಅಲ್–ಖಲ್ಫ್ ಫಿ ಅಲ್–ವಾದಿ ಇಂದ್ ಅಲ್–ಅರಬಿ ಕಝುಬುನ್ ವೋಇಲ್ ವಈದೆ ಕರಮುನ್** ಅಂದರೆ ವಾಗ್ದಾನವನ್ನು ಬದಲಾಯಿಸುವುದನ್ನು ಅರಬ್ಬರ ಪ್ರಕಾರ ಸುಳ್ಳು ಎಂದು ಕರೆಯಲಾಗುತ್ತದೆ ಮತ್ತು ವಈದ್ ಅಂದರೆ ವಾಗ್ದಾನವನ್ನು ಬದಲಾಯಿಸುವುದನ್ನು ಅಂದರೆ ಶಿಕ್ಷೆಯ ಸುದ್ದಿಯು ಬದಲಾದರೆ ಅದನ್ನು ಗೌರವ ಮತ್ತು ದಯೆ ಎಂದು ಕರೆಯಲಾಗುತ್ತದೆ.

ಆದ್ದರಿಂದ, ಈ ಆಯತ್ತಿನ ಒಂದು ಅರ್ಥವೆಂದರೆ ನಾವು ಕೆಲವೊಮ್ಮೆ ವಾಗ್ದಾನದ ಸುದ್ದಿಯನ್ನು ಬದಲಾಯಿಸುತ್ತೇವೆ. ಅವಿಶ್ವಾಸಿಗಳು ಇದನ್ನು ವಿರೋಧಿಸುತ್ತಾರೆ. ಆದರೆ ಅವರ ಆಕ್ಷೇಪ ಸರಿಯಲ್ಲ. ಹಾಗೆ ಮಾಡುವುದು ಬುದ್ಧಿವಂತಿಕೆಗೆ ಅನುಗುಣವಾಗಿರುತ್ತದೆ, ಇದು ಯಾರ

*(ಪುಟ ಸಂಖ್ಯೆ–08 ರಲ್ಲಿ ಮುಂದುವರಿಸಲಾಗಿದೆ)*

*(ಪುಟ ಸಂಖ್ಯೆ 12ರ ಉಳಿದ ಭಾಗ)*

**"ಮಸ್ಜಿದ್ ಫತ್ಹೇ ಅಝೀಮ್"** ಗೆ ಹೊರಟರು. ಆಗ ಟರ್ಮಿನಲ್ 5 ಶಿಕಾಗೋ ವಿಮಾನ ನಿಲ್ದಾಣದ ಸಹಾಯಕ ವ್ಯವಸ್ಥಾಪಕ ಹುಝೂರ್ ಅನ್ವರ್(ಅತಬಿಅ) ಅವರ ಜೊತೆಗಿದ್ದರು. ಅವರು ಲಾಂಜ್‌ನಲ್ಲಿ ಹುಝೂರ್ ಅನ್ವರ್(ಅತಬಿಅ) ಅವರೊಂದಿಗೆ ಬಾವಚಿತ್ರ ತೆಗೆಯುವ ಇಚ್ಛೆಯನ್ನು ವ್ಯಕ್ತಪಡಿಸಿ ಚಿತ್ರವನ್ನು ತೆಗೆದುಕೊಂಡಿದ್ದರು. ಹುಝೂರ್ ಅನ್ವರ್(ಅತಬಿಅ) ವಿಮಾನ ನಿಲ್ದಾಣದ ಹೊರಗೆ ಕಾರಿನಲ್ಲಿ ಕುಳಿತಿದ್ದಾಗ, ಈ ಮ್ಯಾನೇಜರ್ ಹುಝೂರ್ ಅನ್ವರ್(ಅತಬಿಅ) ಅವರ ಕಾರಿನ ಬಳಿ ನಿಂತರು, ಅವರ ಕಣ್ಣಲ್ಲಿ ನೀರು ತುಂಬಿತ್ತು. ಅವರು ತಿಳಿಸಿದರು ಇಂದು ನನ್ನ ಇಡೀ ಜೀವನದ ಆಧ್ಯಾತ್ಮಿಕ ಅನುಭವದ ದಿನವಾಗಿದೆ. ಇಂತಹ ಮಹಾನ್ ಆಧ್ಯಾತ್ಮಿಕ ವ್ಯಕ್ತಿತ್ವವನ್ನು ಭೇಟಿಯಾಗುವ ಅವಕಾಶ ನನಗೆ ಇಂದು ಲಭಿಸಿದೆ. ಈ ವ್ಯಕ್ತಿತ್ವದ ಸಾಮೀಪ್ಯದಿಂದ ಇಂದು ನಾನು ಅನುಗ್ರಹಿಸಲ್ಪಟ್ಟಿದ್ದೇನೆ, ನನಗೆ ಬಹಳ ದೊಡ್ಡ ಪ್ರತಿಫಲ ದೊರಕಿದೆ, ಇಂದಿನ ಈ ಘಟನೆಯು ನನಗೆ ನನ್ನ ಜೀವಮಾನದ ಘಟನೆಯಾಗಿ ಇರಲಿದೆ.

ಶಿಕಾಗೋ ಏರ್‌ಪೋರ್ಟ್ ಅಥಾರಿಟಿ ಟರ್ಮಿನಲ್ 5 ರ ಮ್ಯಾನೇಜರ್ ಶ್ರೀ ಬೆನ್ ಸಿಪಿಯೋರಾ ಕೂಡ ಹುಝೂರ್ ಅನ್ವರ್(ಅತಬಿಅ) ಅವರೊಂದಿಗೆ ತಮ್ಮ ಆಸೆಯನ್ನು ವ್ಯಕ್ತಪಡಿಸುವ ಮೂಲಕ ಬಾವಚಿತ್ರ ತೆಗೆದುಕೊಂಡರು. ಅವರು ಆ ದಿನಗಳಲ್ಲಿ ರಜೆಯಲ್ಲಿದ್ದರು. ಖಲೀಫತುಲ್ ಮಸೀಹ್ ಅವರು ಆಗಮಿಸುತ್ತಿದ್ದಾರೆ ಎಂದು ಅವರಿಗೆ ತಿಳಿದಾಗ ಅವರು ತಮ್ಮ ರಜೆಯನ್ನು ರದ್ದುಪಡಿಸಿ ಹುಝೂರ್ ಅನ್ವರ್(ಅತಬಿಅ) ಅವರನ್ನು ಸ್ವಾಗತಿಸಲು ಮತ್ತು ಅವರನ್ನು ಭೇಟಿಯಾಗಲು ಬಂದಿದ್ದರು. 2012 ರಲ್ಲಿ ಹುಝೂರ್ ಅನ್ವರ್(ಅತಬಿಅ) ಅವರು ಶಿಕಾಗೋಗೆ ಬಂದಾಗ, ಅವರು ಭೇಟಿಯಾಗಲು ಸಾಧ್ಯವಾಗಿರಲಿಲ್ಲ ಎಂದು ಅವರು ಹೇಳಿದರು.

6:45 ಕ್ಕೆ ವಿಮಾನ ನಿಲ್ದಾಣದಿಂದ ಹೊರಟು ಸುಮಾರು ಒಂದು ಗಂಟೆ ಪ್ರಯಾಣಿಸಿದ ನಂತರ ಹುಝೂರ್ ಅನ್ವರ್(ಅತಬಿಅ) 7:40ಕ್ಕೆ ಝಿಯಾನ್ ಜಮಾಅತ್‌ಗೆ ಆಗಮಿಸಿದರು.

"ಮಸ್ಜಿದ್ ಫತ್ಹೇ ಅಝೀಮ್" ಅನ್ನು ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಇದರಿಂದಾಗಿ ಮಸೀದಿಯ ಸುತ್ತಲಿನ ವಿಶಾಲ ಪ್ರದೇಶವೂ ಪ್ರಕಾಶಮಾನವಾಗಿತ್ತು. ತಮ್ಮ ಪ್ರೀತಿಯ ಯಜಮಾನರನ್ನು ಸ್ವಾಗತಿಸಲು ಮತ್ತು ಅವರ ಅನುಗ್ರಹದಾಯಕ ಮುಖಚಹರೆಯನ್ನು ನೋಡಲು ಅಮೇರಿಕಾದ ದೂರದ ನಗರಗಳು ಮತ್ತು ಪಟ್ಟಣಗಳಲ್ಲಿ ವಾಸಿಸುವ ಹುಝೂರ್ ಅನ್ವರ್(ಅತಬಿಅ) ಅವರ ಪ್ರೇಮಿಗಳು ಬೆಳಿಗ್ಗೆಯಿಂದಲೇ ಇಲ್ಲಿಗೆ ಬರಲು ಪ್ರಾರಂಭಿಸಿದ್ದರು. ತಮ್ಮ ಆತ್ಮೀಯ ಮತ್ತು ಪ್ರೀತಿಯ ಯಜಮಾನರನ್ನು ಭೇಟಿ ಮಾಡಲು ಉತ್ಸುಕರಾಗಿದ್ದ ಪುರುಷರು, ಮಹಿಳೆಯರು, ಮಕ್ಕಳು ಮತ್ತು ವೃದ್ಧರ ಗುಂಪು ಅಲ್ಲಿತ್ತು.

ಝಿಯಾನ್ ಜಮಾಅತ್‌ನ ಜೊತೆಗೆ, ಈ ಅಭಿಮಾನಿಗಳು ಆಸ್ಟಿನ್, ಬಾಲ್ಟಿಮೋರ್, ಬೋಸ್ಟನ್, ಬ್ರೂಕ್ಲಿನ್, ಬೇಪಾಯಿಂಟ್, ಸೆಂಟ್ರಲ್ ಜರ್ಸಿ, ಶಿಕಾಗೋ, ಕೊಲಂಬಸ್, ಹವಾಯಿ, ಡೇಟನ್, ಡೆಟ್ರಾಯಿಟ್, ಡಲ್ಲಾಸ್, ಅಟ್ಲಾಂಟಾ, ಹಾರ್ಟ್‌ಫೋರ್ಡ್, ಹೂಸ್ಟನ್, ಇಂಡಿಯಾನಾ, ಕಾನ್ಸಾಸ್ ಸಿಟಿ, ಸಿಯಾಟಲ್, ಸೇಂಟ್ ಲೂಯಿಸ್, ಲಾಂಗ್ ಐಲ್ಯಾಂಡ್, ಮೇರಿಲ್ಯಾಂಡ್, ಅಯೋವಾ, ಮಿಯಾಮಿ, ಮಿಲ್ವಾಕೀ, ಉತ್ತರ ಜರ್ಸಿ, ಉತ್ತರ ವರ್ಜೀನಿಯಾ, ಪೋರ್ಟ್ಲ್ಯಾಂಡ್, ನ್ಯೂಯಾರ್ಕ್, ವಾಷಿಂಗ್ಟನ್, ರಿಚ್ಮಂಡ್, ಸ್ಯಾಕ್ರಮೆಂಟೊ, ಫಿಲಡೆಲ್ಫಿಯಾ, ಪಿಟ್ಸ್‌ಬರ್ಗ್, ಫೀನಿಕ್ಸ್, ಓಷ್ಕೋಶ್, ಒರ್ಲ್ಯಾಂಡೊ, ಸೇಂಟ್ ಪಾಲ್, ಸೌತ್ ವರ್ಜೀನಿಯಾ ವಿಲಿಂಗ್‌ಬರೋ, ನ್ಯೂವಾರ್ಕ್ ಮತ್ತು ಸಿರಾಕ್ಯೂಸ್‌ನಿಂದಲೂ ಜಮಾಅತ್‌ಗಳಿಂದಲೂ ಬಂದು ಸೇರಿದ್ದರು.

ಕೆಲವು ಜಮಾಅತ್‌ಗಳ ಸದಸ್ಯರು ಸುದೀರ್ಘ ಪ್ರಯಾಣದ ನಂತರ ತಮ್ಮ ಪ್ರೀತಿಯ ಯಜಮಾನನನ್ನು ಸ್ವಾಗತಿಸಲು ಝಿಯಾನ್‌ಗೆ ಆಗಮಿಸಿದ್ದರು. ಅವರು ಅಲಬಾಮಾದಿಂದ 782 ಮೈಲುಗಳು, ಚಾರ್ಲೋಟ್‌ನಿಂದ 813 ಮೈಲುಗಳು, ಬ್ರೂಕ್ಲಿನ್‌ನಿಂದ 839 ಮೈಲುಗಳು, ಅಲ್ಬನಿಯಿಂದ 864 ಮೈಲುಗಳು ಮತ್ತು ಡಲ್ಲಾಸ್‌ನಿಂದ 961 ಮೈಲುಗಳು ಪ್ರಯಾಣಿಸಿದ್ದರು.

ಅಂತೆಯೇ, ಲಾಸ್ ವೇಗಾಸ್‌ನಿಂದ 1,778 ಮೈಲುಗಳು, ಟಕ್ಸನ್ 1,784 ಮೈಲುಗಳು, ಸಿಯಾಟಲ್ 2,014 ಮೈಲುಗಳು, ಲಾಸ್ ಏಂಜಲೀಸ್ 2,046 ಮೈಲುಗಳು ಮತ್ತು ಸ್ಯಾಕ್ರಮೆಂಟೊ ಜಮಾಅತ್‌ನಿಂದ 2,072 ಮೈಲುಗಳು ಪ್ರಯಾಣಿಸಿ ಝಿಯಾನ್‌ನಲ್ಲಿ ಭೇಟಿಯಾಗಲು ಮತ್ತು ಸ್ವಾಗತಿಸಲು ಆಗಮಿಸಿದ್ದರು.

ಈ ಹೆಚ್ಚಿನ ಸಂಖ್ಯೆಯ ಸದಸ್ಯರಲ್ಲಿ ಪುರುಷರು ಮತ್ತು ಮಹಿಳೆಯರು, ತಮ್ಮ ಜೀವನದಲ್ಲಿ ಮೊದಲ ಬಾರಿಗೆ ಹುಝೂರ್ ಅನ್ವರ್(ಅತಬಿಅ) ಅವರನ್ನು ಭೇಟಿ ಮಾಡಲು ಮತ್ತು ತಮ್ಮ ಪ್ರೀತಿಯ ಯಜಮಾನರನ್ನು ಹತ್ತಿರದಿಂದ ನೋಡಲು ಬಂದಿದ್ದರು. ಅವರ ಪ್ರತಿ ಕ್ಷಣವೂ ಬಹಳ ಉತ್ಸಾಹದಿಂದ ಸಾಗುತ್ತಿತ್ತು. ಎಂಟಿಎ ಕ್ಯಾಮೆರಾಗಳು ಸಂಪೂರ್ಣ ಸ್ವಾಗತ ದೃಶ್ಯವನ್ನು ಚಿತ್ರೀಕರಿಸುತ್ತಿದ್ದವು. ಹುಝೂರ್ ಅನ್ವರ್(ಅತಬಿಅ) ಅವರ ಕಾರು ಯಾವ ಕ್ಷಣದಲ್ಲಾದರೂ ಈ ಅಹ್ಮದೀಯ ಕೇಂದ್ರವನ್ನು ಪ್ರವೇಶಿಸುವ ಗೇಟಿನತ್ತ ಎಲ್ಲರ ಕಣ್ಣು ನೆಟ್ಟಿತ್ತು.

ಅಂತಿಮವಾಗಿ, ಎಲ್ಲರಿಗೂ ಅತ್ಯಂತ ಆಶೀರ್ವಾದ ಮತ್ತು ಸ್ಮರಣೀಯ ಮತ್ತು ಐತಿಹಾಸಿಕ ಕ್ಷಣ ಬಂದಿತು. ಸರಿಯಾಗಿ 7:35 PM ಕ್ಕೆ, ಹುಝೂರ್ ಅನ್ವರ್(ಅತಬಿಅ) ಕಾರಿನಿಂದ ಹೊರಬಂದು ಕೈ ಎತ್ತಿ ಎಲ್ಲರಿಗೂ ಅಸ್ಸಲಾಮು ಅಲೈಕುಮ್ ಎಂದು ಹೇಳಿದರು. ಮತ್ತೊಂದೆಡೆ ಸದಸ್ಯರ ಕೈಗಳೂ ಎತ್ತಿದವು. ಹುಝೂರ್ ಅನ್ವರ್(ಅತಬಿಅ) ತಮ್ಮ ಪ್ರೇಮಿಗಳನ್ನು ನೋಡುತ್ತಿದ್ದರು ಮತ್ತು ಆ ಪ್ರೇಮಿಗಳಾದ ಖಿಲಾಫತ್‌ನ ಅನುಯಾಯಿಗಳ ಕಣ್ಣುಗಳು ತಮ್ಮ ಪ್ರೀತಿಯ ಇಮಾಮ್ ಅವರ ಅನುಗ್ರಹದಾಯಕವಾದ ಮುಖದ ಮೇಲೆ ನಿಂತಿದ್ದವು. ಹಲವರ ಕಣ್ಣಲ್ಲಿ ನೀರು ತುಂಬಿತ್ತು. ಗೆಳೆಯರು ಘೋಷಣೆಗಳನ್ನು ಕೂಗುತ್ತಿದ್ದರು. ಮಹಿಳೆಯರು ಇನ್ನೊಂದೆಡೆ ನಿಂತಿದ್ದರು. ಹುಝೂರ್ ಅನ್ವರ್(ಅತಬಿಅ) ಅವರ ನಡುವೆ ಹಾದು ಹೋಗುತ್ತಿದ್ದಾಗ ಮಹಿಳೆಯರ ಕಡೆಗೆ ಬಂದು ಕೈ ಎತ್ತಿ ಅಸ್ಸಲಾಮು ಅಲೈಕುಮ್ ಎಂದು ಹೇಳಿದರು. ಎಲ್ಲಾ ಕಡೆಯಿಂದ ವ ಅಲೈಕುಮ್ ಅಸ್ಸಲಾಮ್ ಎಂದು ಕೇಳಿಸಿತು, ಮಹಿಳೆಯರು ಮತ್ತು ಮಕ್ಕಳು ತಮ್ಮ ಪ್ರೀತಿಯ ಯಜಮಾನರಿಗೆ ಕೈ ಬೀಸುತ್ತಿದ್ದರು. ಇಂದು, ಝಿಯಾನ್ ನಾಡಿನಲ್ಲೂ ಪ್ರೀತಿ ಮತ್ತು ವಾತ್ಸಲ್ಯದ ಹೊಸ ಕಥೆಗಳು ಸೃಷ್ಟಿಯಾಗುತ್ತಿತ್ತು.

ಹುಝೂರ್ ಅನ್ವರ್(ಅತಬಿಅ) ಅವರ ವಾಸಸ್ಥಳವನ್ನು "ಮಸ್ಜಿದ್ ಫತ್ಹೇ ಅಝೀಮ್"ನ ಹೊರ ಆವರಣದಲ್ಲಿರುವ ಅತಿಥಿ ಗೃಹದಲ್ಲಿ ಏರ್ಪಡಿಸಲಾಗಿತ್ತು. ನಂತರ ಹುಝೂರ್ ಅನ್ವರ್(ಅತಬಿಅ) ಅಲ್ಲಿರುವ ಅವರ ನಿವಾಸಕ್ಕೆ ತೆರಳಿದರು. ರಾತ್ರಿ 8:10 ಗಂಟೆಗೆ ಹುಝೂರ್ ಅನ್ವರ್(ಅತಬಿಅ) ಅವರು ಫತ್ಹೇ ಅಝೀಮ್ ಮಸೀದಿಗೆ ಭೇಟಿ ನೀಡಿ ಮಗ್ರಿಬ್ ಮತ್ತು ಇಶಾ ನಮಾಝನ್ನು ನಿರ್ವಹಿಸಿದರು. ನಮಾಝ್ ನಿರ್ವಹಿಸಿದ ನಂತರ ಹುಝೂರ್ ಅನ್ವರ್(ಅತಬಿಅ) ಅವರು ತಮ್ಮ ನಿವಾಸಕ್ಕೆ ತೆರಳಿದರು.

**ಅಹ್ಮದೀಯ ಜಮಾಅತ್ ಅಮೇರಿಕಾದ ಸಂಕ್ಷಿಪ್ತ ಇತಿಹಾಸ**

ಅಹ್ಮದಿಯಾ ಮುಸ್ಲಿಮ್ ಜಮಾಅತ್ ಅಮೇರಿಕಾದ ಇತಿಹಾಸದಲ್ಲಿ 1920ರ ವರ್ಷವು ಬಹಳ ಮಹತ್ವವನ್ನು ಹೊಂದಿದೆ. ಅಂದು ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ರವರ ಸಲಹೆ ಮೇರೆಗೆ ಲಂಡನ್‌ನಿಂದ ಹಝ್ರತ್ ಡಾ. ಮುಫ್ತಿ ಮುಹಮ್ಮದ್ ಸಾದಿಕ್ ಸಾಹಿಬ್‌ರವರು ಅಮೇರಿಕದ ಮೊದಲ ಪ್ರಚಾರಕರಾಗಿ ಜನವರಿ 26, 1920 ರಂದು ಲಿವರ್‌ಪೂಲ್ ಬಂದರ್ ಮುಖಾಂತರ 21 ದಿನಗಳ ಪ್ರವಾಸದ ನಂತರ 15 ಫೆಬ್ರವರಿ 1920ರಂದು ಯುನೈಟೆಡ್ ಸ್ಟೇಟ್ಸ್‌ನ ಫಿಲಡೆಲ್ಫಿಯಾ ಬಂದರಿಗೆ ಬಂದಿಳಿದಿದ್ದರು. ಆದರೆ ಅವರನ್ನು ಈ ದೇಶಕ್ಕೆ ಪ್ರವೇಶಿಸದಂತೆ ತಡೆಯಲಾಯಿತು. ಮತ್ತು ಅವರನ್ನು ಬಂದ ಹಡಗಿನಲ್ಲೆ ಹಿಂತಿರುಗಿ ಕಳುಹಿಸಲು ನಿರ್ಧರಿಸಲಾಯಿತು. ಈ ನಿರ್ಧಾರದ ವಿರುದ್ಧ ಹಝ್ರತ್ ಮುಫ್ತಿ ಮುಹಮ್ಮದ್ ಸಾದಿಕ್ ಸಾಹಿಬ್ ಅವರು ವಾಷಿಂಗ್ಟನ್‌ನ ವಸಾಹತು ಇಲಾಖೆಗೆ ಮನವಿ ಮಾಡಿದರು. ತದನಂತರ ಅವರನ್ನು ಸಮುದ್ರ ತೀರದ ಮನೆಯೊಂದರಲ್ಲಿ ಬಂಧಿಸಿ ಸೆರೆಮನೆಗೆ ಹಾಕಲಾಯಿತು. ಈ ಮನೆಯಿಂದ ಹೊರಬರುವುದನ್ನು ನಿಷೇಧಿಸಲಾಗಿತ್ತು. ಆದರೆ ಅವರು ಛಾವಣಿಯ ಮೇಲೆ ನಡೆಯಬಹುದಾಗಿತ್ತು, ಅದರ ಬಾಗಿಲು ದಿನಕ್ಕೆ ಎರಡು ಬಾರಿ ಮಾತ್ರ ತೆರೆಯಲಾಗುತ್ತಿತ್ತು.

ಈ ಮನೆಯಲ್ಲಿ ಕೆಲವು ಯುರೋಪಿಯನ್ನರನ್ನು ಸಹ ಬಂಧಿಸಲಾಗಿತ್ತು. ಹಝ್ರತ್ ಮುಫ್ತಿ ಸಾಹಿಬ್ ಅವರು ಅವಕಾಶವನ್ನು ಬಳಸಿಕೊಂಡರು ಮತ್ತು ತಮ್ಮ ಸಹ ಕೈದಿಗಳಿಗೆ ಬೋಧಿಸಲು ಪ್ರಾರಂಭಿಸಿದರು, ಇದರ ಪರಿಣಾಮವಾಗಿ ಹದಿನೈದು ಕೈದಿಗಳು ಎರಡು ತಿಂಗಳೊಳಗೆ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು.

ಅಮೇರಿಕದ ನೆಲದಲ್ಲಿ ಬೈಅತ್ ಮಾಡಿದ ಮೊದಲ ಅಹ್ಮದಿಯ ಹೆಸರು Mr. R.I.ರೋಚ್‌ಫೋರ್ಡ್ ಆಗಿತ್ತು. ಇವರಲ್ಲದೆ ಜಮೈಕಾ, ಬ್ರಿಟಿಷ್ ಗಯಾನಾ, ಪೋಲೆಂಡ್, ರಷ್ಯಾ, ಜರ್ಮನಿ, ಅಜೋರ್ಸ್, ಬೆಲ್ಜಿಯಂ, ಪೋರ್ಚುಗಲ್, ಇಟಲಿ ಮತ್ತು ಫ್ರಾನ್ಸ್‌ನಿಂದ ಸಂಬಂಧ ಹೊಂದಿರುವವರು ಸಹ ಬೈಅತ್ ಮಾಡಿದರು.

**(ಮುಂದುವರಿಯುವುದು)**

*ವಿಶೇಷ ಸೂಚನೆ*

"ಬದರ್" ವಾರಪತ್ರಿಕೆಯ ಚಂದಾದಾರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.
ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly BADAR Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.03, Thursday, 17 November 2022, Issue No. 46

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

26 ಸೆಪ್ಟೆಂಬರ್ 2022 (ಸೋಮವಾರ) ಅಮೇರಿಕಾದ ಅಹ್ಮದಿಯಾ ಜಮಾಅತ್‌ನ ಇತಿಹಾಸದಲ್ಲಿ ಐತಿಹಾಸಿಕ ಮತ್ತು ಅತ್ಯಂತ ಮಂಗಳಕರ ದಿನವಾಗಿದೆ. ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲ ಬಿನಸ್ರಿಹಿಲ್ ಅಝೀಝ್ ಅವರು ತಮ್ಮ ಐದನೇ ಪ್ರವಾಸವನ್ನು ಅಮೇರಿಕಕ್ಕೆ ಕೈಗೊಂಡರು.

ಹುಝೂರ್ ಅನ್ವರ್(ಅತಬಿಅ) ಅವರು ತಮ್ಮ ಮೊದಲ ಅಮೇರಿಕ ಪ್ರವಾಸವನ್ನು ಜೂನ್ 16 ರಿಂದ ಜೂನ್ 24, 2008 ರವರೆಗೆ ಕೈಗೊಂಡಿದ್ದರು. ಅದರ ನಾಲ್ಕು ವರ್ಷಗಳ ನಂತರ 2012ರಲ್ಲಿ ಹುಝೂರ್ ಅನ್ವರ್(ಅತಬಿಅ) ಅವರು ಅಮೇರಿಕಕ್ಕೆ ಭೇಟಿ ನೀಡಿ ಜೂನ್ 16 ರಿಂದ ಜುಲೈ 3 ರವರೆಗೆ ಅಮೇರಿಕಾದಲ್ಲಿಯೇ ಇದ್ದರು. ಈ ಪ್ರವಾಸದ ಸಮಯದಲ್ಲಿ (ಜೂನ್ 27, 2012 ರಂದು) ಹುಝೂರ್ ಅನ್ವರ್(ಅತಬಿಅ) ಅವರು ಕ್ಯಾಪಿಟಲ್ ಹಿಲ್‌ನಲ್ಲಿ ತಮ್ಮ ಐತಿಹಾಸಿಕ ಭಾಷಣ ಮಾಡಿದ್ದರು.

ನಂತರ, ಮುಂದಿನ ವರ್ಷದಲ್ಲಿ, ಹುಝೂರ್ ಅನ್ವರ್(ಅತಬಿಅ) ಅಮೇರಿಕದ ಪಶ್ಚಿಮ ಕರಾವಳಿ, ಲಾಸ್ ಏಂಜಲೀಸ್‌ಗೆ ಪ್ರಯಾಣ ಬೆಳೆಸಿದ್ದರು. ಈ ಪ್ರವಾಸದಲ್ಲಿ ಹುಝೂರ್ ಅನ್ವರ್(ಅತಬಿಅ) ಅವರು ಮೇ 4 ರಿಂದ ಮೇ 15 ರವರೆಗೆ ಅಲ್ಲಿ ಉಳಿದುಕೊಂಡಿದ್ದರು. ಈ ಸಂದರ್ಭದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ನಂತರ 2018 ರಲ್ಲಿ ಹುಝೂರ್ ಅನ್ವರ್(ಅತಬಿಅ) ಅವರು ತಮ್ಮ ನಾಲ್ಕನೇ ಅಮೇರಿಕಾ ಪ್ರವಾಸವನ್ನು ಮಾಡಿದರು. ಈ ಪ್ರವಾಸವು ಅಕ್ಟೋಬರ್ 15 ರಿಂದ ನವೆಂಬರ್ 5 ರವರೆಗೆ ಇತ್ತು. ಈ ಪ್ರವಾಸದಲ್ಲಿ ಹುಝೂರ್ ಅನ್ವರ್(ಅತಬಿಅ) ಕೂಡ ಎರಡು ಮೂರು ದಿನಗಳ ಕಾಲ ಗೋಟಮಾಲಾಗೆ ಭೇಟಿ ನೀಡಿದ್ದರು.

ಇಂದು, ಈ ಐದನೇ ಪ್ರವಾಸ ಮತ್ತು ಹುಝೂರ್ ಅನ್ವರ್(ಅತಬಿಅ) ಅವರ ಈ ಅತ್ಯಂತ ಮಂಗಳಕರ ಪ್ರವಾಸವು ಅಮೇರಿಕದ ಝಿಯಾನ್ ನಗರದಿಂದ ಪ್ರಾರಂಭವಾಗುತ್ತಿದೆ.

### ಲಂಡನ್‌ನಿಂದ ಅಮೇರಿಕಕ್ಕೆ ನಿರ್ಗಮನ

ಸೆಪ್ಟೆಂಬರ್ 26 ರಂದು, ಸೋಮವಾರ ಮಧ್ಯಾಹ್ನ 1:00 ಗಂಟೆಗೆ, ಹುಝೂರ್ ಅನ್ವರ್(ಅತಬಿಅ) ಅವರು ತಮ್ಮ ನಿವಾಸದಿಂದ ಹೊರಬಂದರು. ಜಮಾಅತ್‌ನ ಪುರುಷರು ಮತ್ತು ಮಹಿಳೆಯರು ಹುಝೂರ್ ಅನ್ವರ್(ಅತಬಿಅ) ಅವರನ್ನು ಬೀಳ್ಕೊಡಲು ಒಗ್ಗೂಡಿದರು. ಹುಝೂರ್ ಅನ್ವರ್(ಅತಬಿಅ) ದುಆ ಮಾಡಿಸಿ ಕೈ ಬೀಸಿ ಎಲ್ಲರಿಗೂ ಅಸ್ಸಲಾಮು ಅಲೈಕುಂ ಎಂದು ಹೇಳಿದರು. ಬಳಿಕ ವಿಮಾನ ನಿಲ್ದಾಣಕ್ಕೆ ತೆರಳಿದರು. ಸರಿಸುಮಾರು ಮಧ್ಯಾಹ್ನ 1:45 ಕ್ಕೆ, ಹುಝೂರ್ ಅನ್ವರ್(ಅತಬಿಅ) ಅವರು ಹೀಥ್ರೂ ವಿಮಾನ ನಿಲ್ದಾಣಕ್ಕೆ ಆಗಮಿಸಿ ವಿಶೇಷ ಕೋಣೆಗೆ ತೆರಳಿದರು.

ಹುಝೂರ್ ಅನ್ವರ್(ಅತಬಿಅ) ಬರುವ ಮುನ್ನವೇ ವಿಶೇಷ ವ್ಯವಸ್ಥೆಯಡಿಯಲ್ಲಿ ಲಗೇಜ್ ಬುಕ್ಕಿಂಗ್ ಮತ್ತು ಬೋರ್ಡಿಂಗ್ ಕಾರ್ಡ್ ಪಡೆಯುವ ಪ್ರಕ್ರಿಯೆ ಮುಗಿದಿತ್ತು. ವಿಮಾನ ನಿಲ್ದಾಣದಲ್ಲಿ ಹುಝೂರ್ ಅನ್ವರ್(ಅತಬಿಅ) ಅವರನ್ನು ಬೀಳ್ಕೊಡಲು ಜಮಾಅತ್ ಯುಕೆಯ ಮಾನ್ಯ ರಫೀಕ್ ಅಹ್ಮದ್ ಹಯಾತ್ ಸಾಹಿಬ್ ಅಮೀರ್, ಮಜ್ಲಿಸ್ ಅನ್ಸಾರುಲ್ಲಾಹ್ ಯುಕೆಯ ಉಪಾಧ್ಯಕ್ಷರಾದ ಮಾನ್ಯ ಸಾಹಿಬ್ಜಾದಾ ಮಿರ್ಝಾ ವಾಕಾಸ್ ಅಹ್ಮದ್ ಸಾಹಿಬ್ ಮತ್ತು ಮಾನ್ಯ ಮೇಜರ್ ಮಹ್ಮೂದ್ ಸಾಹಿಬ್ (ವಿಶೇಷ ಭದ್ರತಾ ಅಧಿಕಾರಿ) ಹುಝೂರ್ ಅನ್ವರ್(ಅತಬಿಅ) ಅವರೊಂದಿಗೆ ಬಂದರು.

ಜಮಾಅತ್ ಅಹ್ಮದಿಯಾ ಅಮೇರಿಕಾ ಪ್ರವಾಸಕ್ಕೆ ಸಂಬಂಧಿಸಿದ ಕೆಲವು ವಿಷಯಗಳನ್ನು ಪೂರ್ಣಗೊಳಿಸಲು ಇಬ್ಬರ ನಿಯೋಗವನ್ನು ಲಂಡನ್‌ಗೆ ಕಳುಹಿಸಿತ್ತು, ಹ್ಯುಮಾನಿಟಿ ಫಸ್ಟ್ ಅಮೇರಿಕಾ ಅಧ್ಯಕ್ಷರಾದ ಮಾನ್ಯ ಮುನ್‌ಇಮ್ ನಈಮ್ ಸಾಹಿಬ್ ಮತ್ತು ಮಾನ್ಯ ಡಾ. ತನ್ವೀರ್ ಅಹ್ಮದ್ ಸಾಹಿಬ್. ಕಾರವಾನ್ ಜೊತೆಗಿನ ಈ ಪ್ರವಾಸದಲ್ಲಿ ಸೇರಿದ್ದರು.

ಮಧ್ಯಾಹ್ನ 2:45 ಕ್ಕೆ, ವಿಶೇಷ ಪ್ರೋಟೋಕಾಲ್ ವ್ಯವಸ್ಥೆಯಲ್ಲಿ, ಹುಝೂರ್ ಅನ್ವರ್(ಅತಬಿಅ) ಅವರು ವಿಮಾನ ಏರಿದರು. ಯುನೈಟೆಡ್ ಏರ್‌ಲೈನ್ಸ್ ವಿಮಾನ (UA959) ಮಧ್ಯಾಹ್ನ 3:20 ಕ್ಕೆ ಲಂಡನ್‌ನ ಹೀಥ್ರೂ ವಿಮಾನ ನಿಲ್ದಾಣದಿಂದ ಶಿಕಾಗೋಗೆ (ಅಮೇರಿಕಾಗೆ) ಹೊರಟಿತು. ಸರಿಸುಮಾರು ಎಂಟೂವರೆ ಗಂಟೆಗಳ ನಿರಂತರ ಹಾರಾಟದ ನಂತರ, ವಿಮಾನವು ಶಿಕಾಗೋನ ಓ ಹೇರ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸ್ಥಳೀಯ ಸಮಯ 5:53 ಕ್ಕೆ ಇಳಿಯಿತು. [ಶಿಕಾಗೋ (USA) ಸಮಯ ಯುಕೆ ಸಮಯಕ್ಕಿಂತ 6 ಗಂಟೆಗಳಷ್ಟು ಹಿಂದಿದೆ]

### ಅಮೇರಿಕಾದಲ್ಲಿ ಹುಝೂರ್ ಅನ್ವರ್(ಅತಬಿಅ) ಅವರ ಆಗಮನ ಹಾಗೂ ಆತ್ಮೀಯ ಸ್ವಾಗತ

USAನ ಅಮೀರ್ ಸಾಹಿಬ್ ಆದ ಮಾನ್ಯ ಸಾಹಿಬ್ಜಾದಾ ಮಿರ್ಝಾ ಮುಗ್ಫೂರ್ ಅಹ್ಮದ್ ಸಾಹಿಬ್ ಮತ್ತು USA ನಾಯಿಬ್ ಅಮೀರ್ ಸಾಹಿಬ್ ಆದ ಮಾನ್ಯ ಡಾ. ನಸೀಮ್ ರೆಹಮತುಲ್ಲಾ ಸಾಹಿಬ್ ಅವರು ವಿಮಾನದ ಬಾಗಿಲಲ್ಲಿಯೇ ಹುಝೂರ್ ಅನ್ವರ್(ಅತಬಿಅ) ಅವರನ್ನು ಸ್ವಾಗತಿಸಿದರು.

ಯುನೈಟೆಡ್ ಏರ್‌ಲೈನ್ಸ್ ಟರ್ಮಿನಲ್ 5ರ ಶಿಕಾಗೋ ಸಹಾಯಕ ವ್ಯವಸ್ಥಾಪಕ ಮಾನ್ಯ ಕ್ರಿಸ್ ಸಾನ್ಸೆಸ್, ಶಿಕಾಗೋ ವಿಮಾನ ನಿಲ್ದಾಣ ಪ್ರಾಧಿಕಾರದ ವ್ಯವಸ್ಥಾಪಕ ಮಾನ್ಯ ಜೆನ್ ಸಿಪಿಯೊರಾ, ಸ್ಥಳೀಯ ಪೊಲೀಸ್ ಮುಖ್ಯಸ್ಥ ಮತ್ತು ಕಸ್ಟಮ್ಸ್ ಬಾರ್ಡರ್ ಪೆಟ್ರೋಲ್ ವಿಐಪಿ ಸ್ವಾಗತದ ಉಸ್ತುವಾರಿ ಸನ್ಮಾನ್ಯ ಪ್ಯಾರಿಸಿ ಕೂಡ ವಿಮಾನದ ಬಾಗಿಲಲ್ಲಿ ಹುಝೂರ್ ಅನ್ವರ್(ಅತಬಿಅ) ಅವರನ್ನು ಸ್ವಾಗತಿಸಿದರು ಮತ್ತು ವಿಶೇಷ ಪ್ರೋಟೋಕಾಲ್ ವ್ಯವಸ್ಥೆಯಲ್ಲಿ ವಿಶೇಷ ಲಾಂಜ್‌ಗೆ ಹುಝೂರ್ ಅನ್ವರ್(ಅತಬಿಅ) ಅವರನ್ನು ಕರೆತಂದರು.

ಅಮೇರಿಕಾದ ನಾಯಿಬ್ ಅಮೀರ್ ಆದ ವಸೀಂ ಮಲಿಕ್ ಸಾಹಿಬ್, ವಿದೇಶಾಂಗ ವ್ಯವಹಾರಗಳ ರಾಷ್ಟ್ರೀಯ ಕಾರ್ಯದರ್ಶಿಯಾದ ಮಾನ್ಯ ಅಮ್ಜದ್ ಮಹಮೂದ್ ಖಾನ್ ಸಾಹಿಬ್ ಲಾಂಜ್‌ನಲ್ಲಿ ಹುಝೂರ್ ಅನ್ವರ್(ಅತಬಿಅ) ಅವರನ್ನು ಸ್ವಾಗತಿಸಿದರು. ವಿಶ್ರಾಂತಿ ಕೊಠಡಿಯಲ್ಲಿ, ಮಾನ್ಯ ಅಮೀರ್ ಸಾಹಿಬ್ ಯುಎಸ್ಎ ಅವರ ಪತ್ನಿ ಮುಕರ್ರಮ ಸಾಹಿಬ್ಜಾದಿ ಅಮತುಲ್ ಮುಸವ್ವರ್ ಸಾಹಿಬಾ ಅವರು ಹಝ್ರತ್ ಬೇಗಂ ಸಾಹಿಬ ಅವರನ್ನು ಸ್ವಾಗತಿಸಿದರು. ಅದೇ ಲಾಂಜ್‌ನಲ್ಲಿ ಇಮಿಗ್ರೇಷನ್ ಅಧಿಕಾರಿ ಬಂದು ಪಾಸ್‌ಪೋರ್ಟ್‌ಗಳನ್ನು ನೋಡಿದರು.

ಸಂಜೆ 6:20 ಕ್ಕೆ, ಹುಝೂರ್ ಅನ್ವರ್(ಅತಬಿಅ) ಅವರು ವಿಮಾನ ನಿಲ್ದಾಣದಿಂದ ಹೊರಬಂದರು, ನಂತರ ಯುಎಸ್ಎ ನಾಯಿಬ್ ಅಮೀರ್ ಗೌರವಾನ್ವಿತ ಡಾ. ಹಮೀದುರ್ ರೆಹಮಾನ್ ಸಾಹಿಬ್, ನಾಯಿಬ್ ಅಮೀರ್‌ರಾದ ಗೌರವಾನ್ವಿತ ಅಝ್‌ಹರ್ ಹನೀಫ್ ಸಾಹಿಬ್, ಯುಎಸ್ಎ ಮುಬಲ್ಲಿಗ್ ಇಂಚಾರ್ಜ್ ಗೌರವಾನ್ವಿತ ಮುಖ್ತಾರ್ ಅಹ್ಮದ್ ಮಲ್ಹಿ ಸಾಹಿಬ್, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಗೌರವಾನ್ವಿತ ಡಾ. ಬಿಲಾಲ್ ರಾಣಾ ಸಾಹಿಬ್, ಸಾರ್ವಜನಿಕ ವ್ಯವಹಾರಗಳ ರಾಷ್ಟ್ರೀಯ ಕಾರ್ಯದರ್ಶಿ ಮಾನ್ಯ ಮಲಿಕ್ ಬಶೀರ್ ಅಹ್ಮದ್ ಸಾಹಿಬ್, ರಾಷ್ಟ್ರೀಯ ಅಮೀನ್ ಗೌರವಾನ್ವಿತ ಶಂಶಾದ್ ಅಹ್ಮದ್ ನಾಸಿರ್ ಸಾಹಿಬ್, ಸೌತ್ ವರ್ಜೀನಿಯಾದ ಮುಬಲ್ಲಿಗ್ ಸಾಹೇಬರಾದ ಗೌರವಾನ್ವಿತ ಇರ್ಷಾದ್ ಅಹ್ಮದ್ ಮಾಹಿ ಸಾಹಿಬ್ ಹಾಗೂ ಶಿಕಾಗೋದ ಮುಬಲ್ಲಿಗ್ ಹುಝೂರ್ ಅನ್ವರ್(ಅತಬಿಅ) ಅವರನ್ನು ಸ್ವಾಗತಿಸಿದರು.

ವಿಮಾನ ನಿಲ್ದಾಣದಿಂದ ಝಿಯೊನ್ ಜಮಾಅತ್‌ನ ಕೇಂದ್ರ

*(ಪುಟ ಸಂಖ್ಯೆ 11 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.